ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 14—15
೮ ಫೆಬ್ರವರಿ ೧೯೫೮
★
ಪುಟ ೧೦ ಬೆಲೆ: ೧೩ ನ. ಪೈಸೆ

★

= ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನದ ಕರೆ =

ಕರ್ನಾಟಕ ಏಕೀಕರಣವಾದ ನಂತರ ಮೊದಲ ಬಾರಿಗೆ ಸೇರಿದ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನವು ಮಂಗಳೂರಿನಲ್ಲಿ ಜನವರಿ ತಾ॥ 29 ರಿಂದ 31ರವರೆಗೆ ಯಶಸ್ವಿಯಾಗಿ ನಡೆಯಿತು. ಒಟ್ಟು ನೂರು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನವು ಮಂಗಳೂರಿನ ಉಪ ನಗರವಾದ ಭೋಟಾ ಮಂಗಳೂರಿನಲ್ಲಿ, ಸಮುದ್ರ ಕರಾವಳಿಯ ಒಂದು ಆಕರ್ಷಣೀಯವಾದ ಸುಂದರ ಪ್ರದೇಶದ ಪ್ರಶಾಂತ ವಾತಾವರಣದಲ್ಲಿ ನಡೆಯಿತು. ಮೂರು ದಿನ ನಡೆದ ಈ ಸಮ್ಮೇಳನವು ಪ್ರತಿನಿಧಿಗಳಿಗೆ ಎಲ್ಲ ರೀತಿಯಲ್ಲಿಯೂ ಒಂದು ಹೊಸ ಅನುಭವವಾಗಿತ್ತು.

ಬಂದ ಪ್ರತಿನಿಧಿಗಳಲ್ಲಿ ಹೆಚ್ಚಿನವರು ಅನೇಕ ಹೋರಾಟಗಳಲ್ಲಿ ಪಳಗಿದ ಜನ ನಾಯಕರಿದ್ದರು. ಹಲವು ವರ್ಷಗಳಿಂದ ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಿ, ಪ್ರಾಂತದ ರೈತರ, ಕೆಲಸಗಾರರ ಮತ್ತು ಜನತೆಯ ಸಂಘಟನೆ ಮಾಡಿ ಹೋರಾಡಿದವರಿದ್ದರು. ಕೆಲವರು ಇತ್ತೀಚೆಗೆ ಪಾರ್ಟಿಗೆ ಸೇರಿದವರೂ ಇದ್ದರು. ಪ್ರಾಂತದ ವಿವಿಧ ಪ್ರದೇಶಗಳ ಚಳುವಳಿಯನ್ನು ಪ್ರತಿಬಿಂಬಿಸುವ ಪ್ರಾತಿನಿಧ್ಯವಿತ್ತು. ಈಗ ಪಾರ್ಟಿಯು ಬೆಳೆಯುತ್ತಿರುವುದನ್ನು ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳೇ ಸೂಚಿಸುತ್ತಿದ್ದರು.

ಸಮ್ಮೇಳನದ ಕಾರ್ಯಕ್ರಮವು ತಾ॥ 29ರಂದು ಬೆಳಿಗ್ಗೆ 10 ಘಂಟೆಗೆ ಆರಂಭವಾಯಿತು. ಕ್ರಾಂತಿ ಗೀತೆಗಳಾದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಪಾರ್ಟಿ ಕಾರ್ಯದರ್ಶಿಯಾದ ಶ್ರೀ ಎ. ಕೃಷ್ಣಶೆಟ್ಟರು ಸ್ವಾಗತ ಭಾಷಣ ಮಾಡಿದರು. ಸಮ್ಮೇಳನಕ್ಕೆ ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಮುನಿಸಿಪಲ್ ಅಧ್ಯಕ್ಷರಾದ ಶ್ರೀ ಎ. ಅಪ್ಪಸ್ವಾಮಿ ರೆಡ್ಡಿ, ಗುಲ್ಬರ್ಗ ಜಿಲ್ಲೆಯ ನಾಯಕರಾದ ಶ್ರೀನಿವಾಸಗುಡಿ, ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ನಾಯಕರಾದ ಸಿಂಪ್ಸನ್ ಸೋನ್ಸ್ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಆರಿಸಲಾಯಿತು.

ಪ್ರಾಂತಸಮಿತಿ ಕಾರ್ಯದರ್ಶಿಯ ವರದಿ

ಪ್ರಾಂತದ ಪಾರ್ಟಿ ಸಂಘಟನೆ ಮತ್ತು ಚಟುವಟಿಕೆಯ ಬಗ್ಗೆ ಪ್ರಾಂತ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಎನ್. ಎಲ್. ಉಪಾಧ್ಯಾಯರು ವರದಿಯನ್ನು ಕೊಟ್ಟರು. ಅದರಲ್ಲಿ ಪ್ರಾಂತಾದ್ಯಂತ ಪಾರ್ಟಿಯು ನಡೆಸುತ್ತಿರುವ ಕೆಲಸಗಳನ್ನು ಕೊಟ್ಟಿದ್ದಲ್ಲದೆ, ಪ್ರಾಂತದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ, ಕಮ್ಯೂನಿಸ್ಟ್ ಪಾರ್ಟಿಯ ಮೇಲಿರುವ ಜವಾಬ್ದಾರಿಯನ್ನು ತಿಳಿಸಿದರು. ಕಾಂಗ್ರೆಸ್ ಆಡಳಿತೆಯಲ್ಲಿ ವಿವಿಧ ಜನ ವಿಭಾಗಕ್ಕೆ ಆಗಿರುವ ತೊಂದರೆಗಳು, ಸರಕಾರ ಮತ್ತು ಪ್ರತಿಗಾಮಿ ಶಕ್ತಿಗಳು ನಡೆಸುತ್ತಿರುವ ದಬ್ಬಾಳಿಕೆ, ಪ್ರಾಂತಾದ್ಯಂತ ನಡೆಯುವ ಹೋರಾಟಗಳನ್ನು ತಿಳಿಸಲಾಗಿತ್ತು. ಕಾರ್ಯದರ್ಶಿಯವರು ಪ್ರಾಂತದ ಪಾರ್ಟಿಯೊಳಗಿರುವ ನ್ಯೂನತೆಗಳನ್ನೂ ತಿಳಿಸಿ ಪ್ರಾಂತದ ಎಲ್ಲ ಭಾಗಗಳಲ್ಲೂ ಪಾರ್ಟಿಯು ಬೆಳೆಯುವಂತೆ ಮಾಡಬೇಕೆಂದು ಕರೆಕೊಟ್ಟರು.

ಈ ವರದಿಯ ಮೇಲೆ ದೀರ್ಘ ಚರ್ಚೆ ನಡೆಯಿತು. ಸುಮಾರು 30 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಅಭಿಪ್ರಾಯಗಳನ್ನಿತ್ತರು. ಅನಂತರ ಚರ್ಚೆಯನ್ನು ಮುಂದರಿಸಲಾಯಿತು.

ರಾಮಮೂರ್ತಿಯವರ ಭಾಷಣ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೋ ಸದಸ್ಯರಾದ ಶ್ರೀ ಪಿ. ರಾಮಮೂರ್ತಿಯವರು ತಾ॥ 30 ರಂದು ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಜಗತ್ತಿನಲ್ಲಿ ಸಾರ್ವತ್ರಿಕವಾಗಿ ಸಮಾಜವಾದಿ ಶಕ್ತಿಗಳು ಬೆಳೆಯುತ್ತಿರುವುದನ್ನು ವಿವರಿಸಿ ವಿಶ್ವಾದ್ಯಂತ ಸಮಾಜವಾದಿಗಳ ಶಕ್ತಿ ಸಾಮ್ರಾಜ್ಯಶಾಹಿಗಳಿಗಿಂತ ಹೆಚ್ಚಾಗಿರುವುದನ್ನು ತಿಳಿಸಿದರು. ಸೋವಿಯತ್ ಯೂನಿಯನ್, ಚೈನಾ ಮತ್ತಿತರ ಸಮಾಜವಾದಿ ರಾಷ್ಟ್ರಗಳ ಪ್ರಗತಿಯನ್ನೂ, ಏಷ್ಯಾ-ಆಫ್ರಿಕಾ ಖಂಡಗಳಲ್ಲಿ ಹಲವು ರಾಷ್ಟ್ರಗಳು ಸ್ವಾತಂತ್ರ್ಯ ಗಳಿಸಿರುವುದನ್ನೂ, ಮಧ್ಯ ಪ್ರಾಚ್ಯದ ಅರಬ್ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಹೋರಾಟ ಬಲಗೊಂಡಿರುವುದನ್ನೂ ವಿವರಿಸಿದರು.

ರಾಷ್ಟ್ರದ ಪರಿಸ್ಥಿತಿಯನ್ನು, ಕೇರಳ ಸರಕಾರಕ್ಕೂ ಕಾಂಗ್ರೆಸ್ ಸರಕಾರಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿಸಿ ಈ ಸಂದರ್ಭದಲ್ಲಿ ರಾಷ್ಟ್ರದ ಹಿತರಕ್ಷಣೆ ಮಾಡಲು ಹಾಗೂ ಪ್ರಗತಿಯನ್ನು ಸಾಧಿಸಲು ಕಮ್ಯೂನಿಸ್ಟ್ ಪಾರ್ಟಿಯು ಹಿಂದೆಂದಿಗಿಂತಲೂ ಸಂಘಟಿತವಾಗಿ, ಸಾಮೂಹಿಕವಾಗಿ ದುಡಿಯಬೇಕೆಂದರು. ಅದಕ್ಕೋಸ್ಕರ ಪಾರ್ಟಿಯ ಘಟನೆಯನ್ನು ಕೇಂದ್ರ ಸಮಿತಿಯು ಸೂಚಿಸಿರುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ವಿವರಿಸಿದರು. ತಿದ್ದುಪಡಿಯ ಮೂಲ ತತ್ವಗಳನ್ನು ರಾಮಮೂರ್ತಿಯವರು ವಿವರಿಸಿದ ನಂತರ ಅದರ ಮೇಲೆ ಚರ್ಚೆ ನಡೆಯಿತು. ಚರ್ಚೆಯಲ್ಲಿ 20 ಪ್ರತಿನಿಧಿಗಳು ಭಾಗವಹಿಸಿ ಅನೇಕ ಸಲಹೆಗಳನ್ನು ತಿದ್ದುಪಡಿಗಳನ್ನು ಸೂಚಿಸಿದರು. ತಿದ್ದುಪಡಿಯ ಮೂಲ ತತ್ವಗಳಿಗೆ ಸಮ್ಮೇಳನವು ಸರ್ವ ಸಾಮಾನ್ಯ ಅಂಗೀಕಾರವನ್ನು ಕೊಟ್ಟು ಪ್ರತಿನಿಧಿಗಳು ಸೂಚಿಸಿದ ಅಭಿಪ್ರಾಯಗಳನ್ನು ಕೇಂದ್ರ ಸಮಿತಿಗೆ ತಿಳಿಸಬೇಕೆಂದು ತೀರ್ಮಾನಿಸಿತು.

ರೂ. ೨,೦೦೦ ನಿಧಿ ಕೂಡಿಸಲು ಕರೆ

ತಾ॥ 31 ರಂದು ಪ್ರಾಂತ ಸಮಿತಿಯ ಸದಸ್ಯರುಗಳಾದ ಶ್ರೀ ಬಿ.ವಿ. ಕಕ್ಕಿಲ್ಲಾಯ ಮತ್ತು ಎಂ. ಸಿ. ನರಸಿಂಹನ್‌ರವರೂ ಕಾರ್ಯದರ್ಶಿಯವರೂ ಮೊದಲನೆ ದಿವಸ ನಡೆದ ಪ್ರಾಂತದ ಚಟುವಟಿಕೆಗಳ ಬಗ್ಗೆ ನಡೆದ ಚರ್ಚೆಗೆ ಉತ್ತರವಿತ್ತರು. ಪ್ರಾಂತದ ಪಾರ್ಟಿ ಸಂಘಟನೆಯ ಬಗ್ಗೆ ಮತ್ತು ಪಾರ್ಟಿಯನ್ನು ಬಲಗೊಳಿಸುವ ಬಗ್ಗೆ ನಿರ್ಣಯವನ್ನು ಮಾಡಲಾಯಿತು. ಅದರಲ್ಲಿ ಮೇ 1ರೊಳಗೆ ಪ್ರಾಂತ ಸಮಿತಿಗೆ ರೂ. 2,000/- ನಿಧಿಯನ್ನು ಕೂಡಿಸಬೇಕೆಂದು ನಿರ್ಧರಿಸಿದ್ದಲ್ಲದೆ ಘಟಕಗಳ ಕೋಟಾವನ್ನು ತೀರ್ಮಾನಿಸಲಾಯಿತು. ಅದಲ್ಲದೆ ಪಾರ್ಟಿಗೆ ಹೆಚ್ಚು ಸದಸ್ಯರನ್ನು ಸೇರಿಸಲೂ ಪಾರ್ಟಿಯ ಮುಖಪತ್ರವಾದ "ಜನಶಕ್ತಿ"ಯನ್ನು ಹೆಚ್ಚು ಮಾರಾಟ ಮಾಡಲೂ ನಿರ್ಧರಿಸಲಾಯಿತು.

ತಾ. 23ರಂದು ಪ್ರತಿಭಟನಾ ದಿನ

ನಂತರ ಸಮ್ಮೇಳನವು ಅನೇಕ ನಿರ್ಣಯಗಳನ್ನು ಅಂಗೀಕರಿಸಿತು. ನಮ್ಮ ಪ್ರಾಂತದಲ್ಲಿ ಸರಕಾರ ಅನುಸರಿಸುತ್ತಿರುವ ಪ್ರತಿಗಾಮಿ ನೀತಿಯನ್ನೂ, ಆಡಳಿತೆಯಲ್ಲಿರುವ ದಕ್ಷಹೀನತೆ, ಸ್ವಜನ ಪಕ್ಷಪಾತ, ಲಂಚಗುಳಿತನಗಳನ್ನು, ಜನತೆಯ ಬೇಡಿಕೆಗಳ ನಿರಾಕರಣೆಗಳನ್ನೂ ಖಂಡಿಸಿ, ಪ್ರಾಂತದ ಅಭಿವೃದ್ಧಿಯ ಬಗ್ಗೆ ಸರಕಾರದ ಪ್ರತಿಗಾಮಿ ಧೋರಣೆ ಮತ್ತಿತರ ವಿಷಯಗಳ ಬಗ್ಗೆ ಜನತೆಯ ಮತ್ತು ಸರಕಾರದ ಗಮನವನ್ನು ಸೆಳೆಯಲು ಫೆಬ್ರವರಿ 23ರಂದು ಪ್ರಾಂತಾದ್ಯಂತ ಪ್ರತಿಭಟನಾ ದಿನವನ್ನಾಚರಿಸಲು ಸಮ್ಮೇಳನವು ಕರೆಕೊಟ್ಟಿತು.

ಸರಕಾರ ಕೂಡಲೇ ಯೋಗ್ಯವಾದ ಮತ್ತು ಪ್ರಗತಿಗಾಮಿಯಾದ ಭೂಸುಧಾರಣೆಯ ಬಗ್ಗೆ ಯೋಗ್ಯ ಶಾಸನವನ್ನು ತಕ್ಷಣ ತರಬೇಕೆಂದು, ನಿರ್ಣಯವಾಯಿತು.

(ಕೊನೇ ಪುಟ ನೋಡಿ)

ಫೆಬ್ರವರಿ 23ರಂದು ಪ್ರತಿಭಟನಾ ದಿನಾಚರಣೆ!

ಫೆಬ್ರವರಿ 23ರಂದು ಪ್ರತಿಭಟನಾ ದಿನಾಚರಣೆ !

ಸರ್ಕಾರದ ಕಾರ್ಮಿಕ ನೀತಿ ಬದಲಾಗಬೇಕು — ಕೆ. ಪಿ. ಟಿ. ಯು. ಸಿ. ಕರೆ

ಸರ್ಕಾರದ ಕಾರ್ಮಿಕ ನೀತಿಯನ್ನು ವಿರೋಧಿಸಲು ಫೆಬ್ರವರಿ 23ರಂದು (ಭಾನುವಾರ) ಪ್ರತಿಭಟನಾ ದಿನಾಚರಣೆ ನಡೆಸಬೇಕೆಂದು ಕೆ. ಪಿ. ಟಿ. ಯು. ಸಿ. ಯ ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ. ಅಂದು ಎಲ್ಲಾ ಕಾರ್ಮಿಕ ಸಂಘಗಳು ಸಭೆ ಮೆರವಣಿಗೆ ನಡೆಸಬೇಕೆಂದು ಕೋರಲಾಗಿದೆ.

ಮತ್ತು 25ರಂದು ಬೆಂಗಳೂರಿನಲ್ಲಿ ಕಾರ್ಮಿಕ ಸಚಿವರನ್ನು ಭೇಟಿ ಮಾಡಿ ಸರ್ಕಾರದ ನೀತಿಯ ಬಗ್ಗೆ ಮನವಿಯೊಂದನ್ನು ಕೊಡಬೇಕೆಂದು ನಿರ್ಧರಿಸಲಾಗಿದೆ. ಈ ಸಂದರ್ಭದಲ್ಲಿ ಎಲ್ಲಾ ಕಾರ್ಮಿಕ ಕೇಂದ್ರಗಳಿಂದ ಕಾರ್ಮಿಕ ಕಾರ್ಯಕರ್ತರು ಬೆಂಗಳೂರಿಗೆ ಬರುವ ನಿರೀಕ್ಷೆ ಇದೆ. ಅಂದು ಬೆಂಗಳೂರಿನಲ್ಲಿ ಬೃಹತ್ ಸಭೆ ನಡೆಸುವ ಏರ್ಪಾಡನ್ನು ಮಾಡಲಾಗುತ್ತಿದೆ.

- ಎರಡನೆಯ ಪಂಚಾಯ್ತಿ ಕೋರ್ಟು ನೇಮಕವಾಗಲು,
- ವಿವಾದಗಳಲ್ಲಿ ಕಾಲ ವಿಳಂಬವಾಗದಿರಲು,
- ಕೂಲಿ ಇತ್ಯಾದಿ ಸಮಸ್ಯೆಯನ್ನು ಬಗೆಹರಿಸುವ ವೇಜ್‌ಬೋರ್ಡು ನೇಮಿಸುವಂತಾಗಲು,
- ದಬ್ಬಾಳಿಕಾ ನೀತಿಯ ವಿರುದ್ಧ
- ಹಿಂದೂಸ್ತಾನ ವಿಮಾನಕಾರ್ಖಾನೆ ನೌಕರರಿಗೆ ಸಹಾನುಭೂತಿ ತೋರಲು

23-25ರಂದು ಪ್ರತಿಭಟನಾ ದಿನಾಚರಣೆ !

ಬಾಗ್‌ದಾದ್ ಕೂಟದ ಸಭೆ

ಕಳೆದ ತಿಂಗಳ 27ರಂದು ಅಂಕಾರದಲ್ಲಿ ಬಾಗದಾದ್ ಮಿಲಿಟರಿ ಕೂಟದ ಸಮಾವೇಶ ನಡೆಯಿತು. ಕಳೆದ ವರ್ಷಾಂತ್ಯದಲ್ಲಿ ನ್ಯಾಟೋ ಕೂಟದ ಸಭೆಯ ನಂತರ ಇದು ಸೇರಿತ್ತು. ಬಾಗದಾದ್ ಕೌಲಿನ ರಾಷ್ಟ್ರಗಳು ಅಣು ಅಸ್ತ್ರಗಳನ್ನು ಪಡೆಯಲು ಯತ್ನಿಸುವುದೇ ಎಂಬ ಶಂಕೆ ಮೂಡಿತ್ತು. ಅಮೆರಿಕಾ ಈ ಬಾರಿಯೂ ಬಾಗದಾದ್ ಕೂಟದ ಪೂರ್ಣ ಸದಸ್ಯನಾಗಲಿಲ್ಲ. ಆದರೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸ್‌ರವರು ಸಭೆಯಲ್ಲಿ ಭಾಗವಹಿಸಿದ್ದರು. ಮಧ್ಯಪ್ರಾಚ್ಯದಲ್ಲಿ ಶಾಂತಿಗೆ ಆತಂಕವಾಗಿರುವ ಈ ಕೂಟದ ಸಭೆಯಲ್ಲಿ ಮಹತ್ವವಾದದ್ದೇನೂ ಸಾಧನೆಯಾಗಿಲ್ಲ ಎಂದೇ ಹೇಳಬಹುದು.

ಅಮೆರಿಕಾವು ಬಾಗದಾದ್ ಕೂಟಕ್ಕೆ ಸದಸ್ಯನಾಗಿ ಸೇರದಿರುವುದಕ್ಕೆ ಕಾರಣಗಳನ್ನು ತಿಳಿಸುತ್ತಾ 'ನ್ಯೂಯಾರ್ಕ್ ಟೈಂಸ್' ಪತ್ರಿಕೆಯ ಹೇಳಿಕೆ ಈ ರೀತಿ ಇದೆ: ಬಾಗದಾದ್ ಕೂಟಕ್ಕೆ ಸದಸ್ಯನಾದಲ್ಲಿ, ಈಗಾಗಲೇ ಇಸ್ರೇಲಿನ ರಕ್ಷಣಾ ಭಾರ ಹೊತ್ತಿರುವುದರಿಂದ ಅದು ಆಡಳಿತಕ್ಕೆ ಹೆಚ್ಚಿನ ಹೊರೆಯಾಗುತ್ತದೆ. ಎರಡನೆಯದು ಈಜಿಪ್ಟಿನೊಂದಿಗೆ ಇರುವ ಸಂಬಂಧವನ್ನೂ ಕಳೆದುಕೊಳ್ಳುವುದು ಶಕ್ಯವಿಲ್ಲ ಸೆನೆಟ್‌ನಲ್ಲಿ ಟೀಕೆ ಬಹಳ ಇರುವುದರಿಂದ ಇದರ ಸದಸ್ಯತನ ಒಪ್ಪಿಗೆ ಪಡೆಯಬೇಕಾಗಿರುವುದು.

ಮುಂದುವರಿದು ಪತ್ರಿಕೆ ಈ ರೀತಿ ಹೇಳಿದೆ: ಬಾಗದಾದ್ ಒಪ್ಪಂದವು ಮಧ್ಯಪ್ರಾಚ್ಯದಲ್ಲಿ ಸೋವಿಯತ್ ಪ್ರಭಾವವನ್ನು ತಡೆಯುವುದರಲ್ಲಿ ಪರಾಭವ ಹೊಂದಿದೆ ಹಾಗೂ ಅದರ ಸದಸ್ಯ ರಾಷ್ಟ್ರಗಳಿಗೆ ಹೆಚ್ಚಿನ ಸೌಲಭ್ಯಗಳೇನನ್ನೂ ಒದಗಿಸಿಲ್ಲ-ಇನ್ನೊಂದು ಅಂಶ ಪಶ್ಚಿಮ ರಾಷ್ಟ್ರಗಳಿಗೆ ಸ್ಪಷ್ಟವಾಗಿರಬೇಕು, ಇರಾಕ್ ಬಾಗದಾದ್ ಕೌಲಿನಲ್ಲಿರುವುದಕ್ಕೆ ಕಾರಣ ಇಸ್ರೇಲಿನ ವಿರುದ್ಧವಾಗಿ ಅದಕ್ಕೆ ಮಿಲಿಟರಿ ರಕ್ಷಣೆ ಒದಗಿರುವುದು ಮತ್ತು ಪಾಕಿಸ್ತಾನಕ್ಕೆ ಭಾರತದ ವಿರೋಧವಾಗಿ ಮಿಲಿಟರಿ ಸೌಲಭ್ಯವಿರುವುದೂ ಕಾರಣವಾಗಿದೆ. ತಮ್ಮ ಉದ್ದೇಶವನ್ನು ಈ ರಾಷ್ಟ್ರಗಳು ಬಹಿರಂಗವಾಗಿ ವ್ಯಕ್ತಗೊಳಿಸಿಯೂ ಇವೆ. ನ್ಯೂಯಾರ್ಕ್ ಟೈಂಸ್ ಪತ್ರಿಕೆಯೇ ಬಾಗದಾದ್ ಕೂಟದ ನೀತಿಯ ಕುರಿತು ಹೀಗೆ ಹೇಳಿರುವುದರ ಮೇಲೆ ಟೀಕೆ ಅನಗತ್ಯವಾಗಿದೆ.

ಅಂಕಾರದಲ್ಲಿ ನಡೆದ ಸಭೆಯಲ್ಲಿ ಸದಸ್ಯ ರಾಷ್ಟ್ರಗಳಲ್ಲಿ ಅತೃಪ್ತಿ ಮೂಡಿರುವುದು, ಬಾಗದಾದ್ ಕೌಲು ಇದ್ದರೂ ಸತ್ತಂತೆ ಇದೆ ಎಂಬ ಭಾವನೆ ಮೂಡಿರುವುದೂ, ಭಾಷಣಗಳನ್ನು ಗಮನಿಸಿದಲ್ಲಿ ಗೋಚರವಾಗುತ್ತದೆ.

ಈಜಿಪ್ಟ್-ಸಿರಿಯಾ ಒಕ್ಕೂಟ

ಒಂದೆಡೆ ಆಕ್ರಮಣಕಾರೀ ಉದ್ದಿಶ್ಯದಿಂದ ಕೂಡಿರುವ ಬಾಗದಾದ್ ಕೂಟ ರಾಷ್ಟ್ರಗಳ ಸಮಾವೇಶವು ಕೂಡಿದ್ದರೆ ಮಧ್ಯಪ್ರಾಚ್ಯದಲ್ಲಿ ಅರಬ್ ರಾಷ್ಟ್ರಗಳ ಐಕ್ಯತೆಯನ್ನು ಸಾಧಿಸಲು ಪ್ರಥಮ ಹೆಜ್ಜೆಯೆನ್ನುವಂತೆ ಈಜಿಪ್ಟ್-ಸಿರಿಯಾ ರಾಷ್ಟ್ರಗಳ ಒಕ್ಕೂಟ ವೇರ್ಪಟ್ಟಿದೆ. 27,000,000 ಜನತೆಯನ್ನಾವರಿಸುವ ಈಜಿಪ್ಟ್—ಸಿರಿಯಾಗಳ ಒಕ್ಕೂಟದ "ಸಂಯುಕ್ತ ಅರಬ್ ರಾಜ್ಯ" ಉದಯಿಸಿದೆ. ಈಜಿಪ್ಟಿನ ಅಧ್ಯಕ್ಷ ನಾಸ್ಸೆರ್ ಮತ್ತು ಸಿರಿಯದ ಅಧ್ಯಕ್ಷ ಕುವಾಟ್ಲೆಯವರು ಘೋಷಣೆಗೆ ಸಹಿ ಹಾಕಿದ್ದಾರೆ.

ಈ ಒಕ್ಕೂಟದ ರಾಜ್ಯಕ್ಕೆ ಹೆಸರು 'ಸಂಯುಕ್ತ ಅರಬ್ ರಾಜ್ಯ' ಎಂದಿರುತ್ತದೆ. ಈ ರಾಜ್ಯವು ಅಧ್ಯಕ್ಷ ಪ್ರಜಾ ಪ್ರಭುತ್ವ ಆಡಳಿತೆಯಾಗಿರುತ್ತದೆ. ರಾಜ್ಯಕ್ಕೆ ಒಂದೇ ಧ್ವಜ ಮತ್ತು ಒಬ್ಬರೇ ಅಧ್ಯಕ್ಷರಿರುತ್ತಾರೆ. ಅಧ್ಯಕ್ಷ ನಾಸೆರರು ಈ ರಾಜ್ಯದ ಕುರಿತು ಮೂಲಭೂತ ತತ್ವಗಳನ್ನು ಘೋಷಿಸುವರು. ಈ ಒಕ್ಕೂಟದ ಬಗ್ಗೆ ಜನಾಭಿಪ್ರಾಯ ತಿಳಿಯಲು 30 ದಿನಗಳೊಳಗಾಗಿ ಈಜಿಪ್ಟ್ ಮತ್ತು ಸಿರಿಯಾ ರಾಷ್ಟ್ರಗಳೆರಡರಲ್ಲೂ ಪ್ಲೆಬಿಸೈಟ್ ನಡೆಯುವುದು. ಈ ಒಕ್ಕೂಟದ ಘೋಷಣೆಯನ್ನು ಎರಡೂ ರಾಷ್ಟ್ರಗಳ ಜನತೆಯು ಹರ್ಷದಿಂದ ಸ್ವಾಗತಿಸಿದ್ದಾರೆ ನೂತನವಾಗಿ ಉದಯಿಸುತ್ತಿರುವ ಒಕ್ಕೂಟದ ಈ ರಾಜ್ಯವು ಅರಬ್ ರಾಷ್ಟ್ರಗಳ ಐಕ್ಯತೆಯನ್ನು ಸಾಧಿಸಿ ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಲೆಂದು ಹಾರೈಸುತ್ತೇವೆ.

ಅಮೆರಿಕದ ಉಪಗ್ರಹ ಮೇಲೆ ಹಾರಿತು

ಹಲವು ಬಾರಿ ವಿಫಲಗೊಂಡು ಕೊನೆಗೊಮ್ಮೆ ಅಮೆರಿಕದ ಭೂ ಉಪಗ್ರಹ ಮೇಲೆ ಹಾರಿತು 30 ಪೌಂಡ್ ತೂಕವುಳ್ಳ "1958 ಅಲ್ಫ" ಎಂಬ ಹೆಸರುಳ್ಳ ಈ ಭೂ ಉಪಗ್ರಹ ಗಂಟೆಗೆ 19,400 ಮೈಲುಗಳಂತೆ ಚಲಿಸುತ್ತಿದೆ. ಸೋವಿಯತ್ ಭೂ ಉಪಗ್ರಹಗಳಿಗಿಂತ ಚಿಕ್ಕದಾಗಿದ್ದರೂ ಸಹ ಇದು ಹೆಚ್ಚು ಕಾಲ ಇರುವುದೆಂದು ಹೇಳಲಾಗಿದೆ. ಭೂ ಭೌತಿಕ ವರ್ಷದಲ್ಲಿ ಹಾರಿಸಲ್ಪಡುತ್ತಿರುವ ಉಪಗ್ರಹಗಳಲ್ಲಿ ಇದು ಮೂರನೆಯದಾಗಿದೆ. ಸೋವಿಯತ್ ಯೂನಿಯನ್ ಇನ್ನೂ ಒಂದು ಉಪಗ್ರಹವನ್ನು ಬಿಡುವುದಾಗಿ ತಿಳಿದುಬಂದಿದೆ. ಹೆಚ್ಚಿನ ವೈಜ್ಞಾನಿಕ ಪ್ರಗತಿಗೆ ಇದು ಮಾರ್ಗವಾಗುತ್ತದೆ. ಸೋವಿಯತ್ ಯೂನಿಯನ್ ಮತ್ತು ಅಮೆರಿಕಾ ಎರಡೂ ರಾಷ್ಟ್ರಗಳ ನಡುವೆ ವೈಜ್ಞಾನಿಕ ವಿಷಯಗಳಲ್ಲಿ ಪೈಪೋಟಿ ನಡೆದು ಪರಿಶೋಧನೆಗಳು ಪರಸ್ಪರ ವಿನಿಮಯವಾದಲ್ಲಿ ಶಾಂತಿಯುತ ಸಹಬಾಳ್ವೆಯ ಗುರಿಗೆ ಸಹಾಯಕವಾಗುತ್ತದೆ. ಸೋವಿಯತ್ ವಿಜ್ಞಾನಿಗಳು ಅಮೆರಿಕದ ವಿಜ್ಞಾನಿಗಳ ಯಶಸ್ವಿ ಪ್ರಯೋಗವನ್ನು ಕೊಂಡಾಡಿದ್ದಾರೆ. ಸೋವಿಯತ್ 'ಸ್ಪೂತ್ನಿಕ್' ಗಳ ಬಗ್ಗೆ ಎಲ್ಲ ಮಾಹಿತಿಯನ್ನೂ ಕೊಡುವುದಾಗಿ ತಿಳಿಸಿದ್ದಾರೆ.

ಅಮೆರಿಕಾ-ರಷ್ಯಾ ಸಾಂಸ್ಕೃತಿಕ ಸಂಬಂಧ

ಅಮೆರಿಕ ಮತ್ತು ರಷ್ಯಾಗಳ ನಡುವೆ ಸಾಂಸ್ಕೃತಿಕ ಸಂಬಂಧದ ಕುರಿತು ಕಳೆದ ತಿಂಗಳ ಅಂತ್ಯದಲ್ಲಿ ಒಪ್ಪಂದವೇರ್ಪಟ್ಟಿದೆ. ಇದು ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಸಡಿಲತೆಗೆ ಸಹಕಾರಿಯಾಗಿದೆ. ಈ ಒಪ್ಪಂದದಂತೆ ಅಮೆರಿಕ ಮತ್ತು ರಷ್ಯಾಗಳ ನಡುವೆ ಸಾಂಸ್ಕೃತಿಕ ವಿನಿಮಯ ಪರಸ್ಪರವಾಗಿ ನಡೆಯುವುದು. ಅಮೆರಿಕ ಮತ್ತು ರಷ್ಯದ ಪ್ರಾಧ್ಯಾಪಕರುಗಳು ಪರಸ್ಪರರ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಖ್ಯಾನ ಮಾಡುವರು, ವಿದ್ಯಾರ್ಥಿಗಳು ಪರಸ್ಪರರ ದೇಶಗಳಲ್ಲಿ ಪ್ರವಾಸ ನಡೆಸುವರು. ಅಲ್ಲದೆ ಆಕಾಶವಾಣಿ ಪ್ರಸಾರದ ಬಗ್ಗೆಯೂ ಒಪ್ಪಂದವಾಗಿದೆ.

ಒಪ್ಪಂದವಾದ ನಂತರ ಹೊರಬಿದ್ದ ಘೋಷಣೆಯಲ್ಲಿ ಈ ರೀತಿ ಹೇಳಲಾಗಿದೆ: ಈ ಒಪ್ಪಂದವು ರಷ್ಯಾ ಮತ್ತು ಅಮೆರಿಕಾಗಳ ನಡುವಣ ಸಂಬಂಧದಲ್ಲಿ ಪರಸ್ಪರರ ತಿಳುವಳಿಕೆಯನ್ನು ಉತ್ತಮಗೊಳಿಸುವುದರಲ್ಲಿ ಮಹತ್ವ ಪೂರ್ಣವಾದ ಮೊದಲು ಹೆಜ್ಜೆಯಾಗಿದೆ. ಈ ಸಾಂಸ್ಕೃತಿಕ ವಿನಿಮಯವು ಎರಡೂ ರಾಷ್ಟ್ರಗಳ ನಡುವೆಯ ಸಂಬಂಧವನ್ನು ಉತ್ತಮಗೊಳಿಸುವುದರಲ್ಲಿ ಸಹಾಯಕವಾಗಿ ಅಂತರ ರಾಷ್ಟ್ರೀಯ ಬಿಕ್ಕಟನ್ನು ಸಡಿಲಗೊಳಿಸಲು ಅನುವಾಗಲೆಂದು ಹಾರೈಸುತ್ತೇವೆ.

ರೈಲ್ವೆಯಲ್ಲಿ ೩೦ ಕೋಟಿ ರೂ. ಅಧಿಕ ವರಮಾನ

ಕಳೆದ ಏಪ್ರಿಲ್ ತಿಂಗಳಿಂದ ನವೆಂಬರ್ ತಿಂಗಳವರೆಗೆ ರೈಲ್ವೆ ಇಲಾಖೆಯು 21 33 ಕೋಟಿ ರೂಗಳ ಅಧಿಕ ವರಮಾನ ಪಡೆದಿದೆ. ವರ್ಷಾಂತ್ಯದಲ್ಲಿ ಬಜೆಟ್ ಸೂಚನೆಯಲ್ಲಿ ಇದ್ದಂತೆ 30 ಕೋಟಿ ರೂ.ಗಳನ್ನು ಪಡೆಯುವುದೆಂದು ಪ್ರಕಟಣೆಯೊಂದು ತಿಳಿಸಿದೆ. ಈ ವರ್ಷಗಳಲ್ಲಿ ಮೂರನೆಯ ನರ್ಗದ ಕೆಲವು ರೈಲುಗಳಿಗೆ ಏರ್‌ಕಂಡಿಷರ್ ಗಾಡಿಗಳನ್ನು ಹಾಕಲಾಗಿದೆ. 319 ಹೊಸ ರೈಲುಗಳನ್ನು ಹಾಕಲಾಗಿದ್ದು 169 ರೈಲುದಾರಿಗಳನ್ನು ವಿಸ್ತರಿಸಲಾಗಿದೆ ಎಂದೂ ಮತ್ತು ನೌಕರರಿಗೆ ಪೆನ್ಷನ್ ಸೌಲಭ್ಯ ಒದಗಿಸಲಾಗಿದೆಯೆಂದೂ ತಿಳಿದು ಬಂದಿದೆ.

ವರ್ಷೇ ವರ್ಷೇ ರೈಲ್ವೆ ದರವನ್ನು ಏರಿಸುತ್ತಿದ್ದು ಸರ್ಕಾರಕ್ಕೆ ಬೇಕಾದಷ್ಟು ವರಮಾನ ಹೆಚ್ಚುತ್ತಿದೆ. ಆದರೆ ಪ್ರಯಾಣಿಕರಿಗೆ ಒದಗಿಸುತ್ತಿರುವ ಸೌಲಭ್ಯ ಮಾತ್ರ ತೀರಾ ಅಲ್ಪವಾಗಿದೆ. ರೈಲ್ವೆ ದುರಂತಗಳಂತೂ ತಡೆಯಿಲ್ಲದೆ ಸಾಗುತ್ತಿದ್ದು, ಪ್ರಯಾಣಿಕರಲ್ಲಿ ಭೀತಿಯನ್ನೇ ಹಬ್ಬಿಸಿದೆ. ಇತ್ತೀಚಿಗೆ ರೈಲ್ವೆ ದುರಂತಗಳನ್ನು ತಗ್ಗಿಸಲು ಸರಕಾರವು ವಿಶೇಷ ಅಧಿಕಾರಿಗಳನ್ನು ನೇಮಿಸುವುದಿದೆ. ರೈಲ್ವೆ ವರಮಾನ ಹೆಚ್ಚಿಸುವುದರಿಂದಷ್ಟೇ ಸರಕಾರವು ತೃಪ್ತಿಗೊಳ್ಳದೆ, ಪ್ರಯಾಣಿಕರ ಸೌಲಭ್ಯಗಳ ಕಡೆ ಗಮನ ಕೊಡುವುದು ಅಗತ್ಯ.

ಮುಂದಿನ ಸಾಲಿನಲ್ಲಿ ಅಧಿಕ ತೆರಿಗೆ ?

ಅನೇಕ ರಾಜ್ಯಗಳು ತಮ್ಮ ಮುಂದಿನ ಬಜೆಟ್‌ನಲ್ಲಿ ಹೊಸ ತೆರಿಗೆಗಳನ್ನು ವಿಧಿಸುವುದೆಂದು ತಿಳಿದುಬಂದಿದೆ. ರಾಜ್ಯ ಸರಕಾರಗಳು ಯೋಜನೆಗಾಗಿ ಮುಂದಿನ ಸಾಲಿನಲ್ಲಿ 200 ಕೋಟಿ ರೂ.ಗಳ ಅಧಿಕ ವರಮಾನವನ್ನು ಗಳಿಸಬೇಕಾಗಿದೆ. ಯೋಜನೆಯ ಕಾರ್ಯಗತಕ್ಕೆ ಮುಂದಿನ ಸಾಲಿನ ಒಟ್ಟು 400ಕೋಟಿ ರೂ.ಗಳ ಮೊತ್ತದಲ್ಲಿ ಕೇಂದ್ರ ಸರಕಾರವು 200 ಕೋಟಿ ರೂಗಳನ್ನು ಮಾತ್ರ ಕೊಡುವುದು. ಅದ್ದರಿಂದ ರಾಜ್ಯ ಸರಕಾರಗಳು ಅಧಿಕ ತೆರಿಗೆ ವಿಧಿಸಿ ವರಮಾನವನ್ನು ಪಡೆಯುವುದು ಅನಿವಾರ್ಯವಾಗಿದೆ. ಅಂದಮೇಲೆ ಮುಂದಿನ ಸಾಲಿನಲ್ಲಿ ಜನತೆಯ ಮೇಲೆ ತೆರಿಗೆ ಹೊರೆ ಮತ್ತಷ್ಟು ಬೀಳುವುದೆಂದು ಖಚಿತ. ಸರಕಾರವು ತೆರಿಗೆ ಕೊಡಲು ಸಾಧ್ಯವಿರುವಂತ ಶ್ರೀಮಂತರ ಮೇಲೆ ತೆರಿಗೆ ವಿಧಿಸಿ ವರಮಾನ ಪಡೆಯುವುದರ ಬದಲು ಸುಲಭವಾಗಿ ಜನರ ಮೇಲೆ ತಳ್ಳುವುದು ಪರಂಪರೆಯಾಗಿದೆ. ಜನತೆ ಈಗಿನಿಂದಲೇ ಮುಂದಿನ ಧಾಳಿಗೆ ಸಿದ್ಧವಿರಬೇಕಾಗಿದೆ.

ಸೋಷಲಿಸ್ಟರ ಸತ್ಯಾಗ್ರಹ

ಸರಕಾರಕ್ಕೆ 16 ಅಂಶಗಳ ಬೇಡಿಕೆಯನ್ನು ಒಪ್ಪಿಸಿದ್ದ ಮೈಸೂರು ರಾಜ್ಯದ ಸೋಷಲಿಸ್ಟರು ಜನವರಿ 26 ರಿಂದ ಸತ್ಯಾಗ್ರಹವನ್ನಾರಂಭಿಸಿದ್ದಾರೆ. ಈವರೆಗೆ ಹಲವು ಬಂಧನಗಳಾಗಿವೆ. ಜನತೆಯ ಬೆಂಬಲವನ್ನು ಆದರವನ್ನು ಪಡೆಯದ ಈ ಚಳವಳಿ ಹೇಗೆ ಮುಂದುವರಿಯುವುದೆಂದು ಎದುರು ನೋಡಬೇಕಿದೆ.

ಟಿ. ಟಿ. ಕೆ. ರಾಜೀನಾಮೆ !

ಮುಂಧ್ರಾ ಪ್ರಕರಣದ ವಿಚಾರಣೆಯು ಕೊನೆಯ ಘಟ್ಟವನ್ನು ಮುಟ್ಟಿದೆ ಮತ್ತು ಜಸ್ಟಿಸ್ ಚಾಗ್ಲಾರವರ ವರದಿಯು ಫೆಬ್ರವರಿ 10ರೊಳಗೆ ಸರಕಾರಕ್ಕೆ ತಲುಪುವುದೆಂದೂ ತಿಳಿದು ಬಂದಿದೆ. ಅಷ್ಟರಲ್ಲೇ, ಈ ಪ್ರಕರಣದಲ್ಲಿ ನೇರ ಪಾತ್ರ ವಹಿಸಿದ್ದ ಅರ್ಥಸಚಿವ ಟಿ. ಟಿ. ಕೃಷ್ಣಮಾಚಾರಿಯವರು ರಾಜಿನಾಮೆ ಇತ್ತಿರುವರೆಂಬ ವದಂತಿ ಹರಡಿದೆ. ಟಿ. ಟಿ. ಕೆ. 'ರಾಜ್ಯಾಂಗ ಘಟನೆ ಪ್ರಶ್ನೆಯ ಸಂಬಂಧವಾಗಿ, ತಾವು ರಾಜಿನಾಮೆ ಇತ್ತಿರುವರೆಂದು ಹೇಳಲಾಗಿದೆ. ಏನೇ ಇರಲಿ ಟಿ. ಟಿ. ಕೆ. ಹೋಗುವುದಂತೂ ಖಂಡಿತ.

ಈ ವರೆಗೆ ಗೌರವವಾಗಿ ರಾಜಿನಾಮೆ ಸಲ್ಲಿಸಿದ್ದಲ್ಲಿ ಎಷ್ಟೋ ಉತ್ತಮವಾಗುತ್ತಿತ್ತು. ಆದರೆ ಸಚಿವ ಟಿ. ಟಿ. ಕೆ ಇನ್ನೂ ಮನಸ್ಸು ಮಾಡಿಲ್ಲವೆಂದು ತೋರುತದ್ತೆ. ಮುಂದಿನ ಪಾರ್ಲಿಮೆಂಟ್ ಅಧಿವೇಶನ ಫೆಬ್ರವರಿ 22ರಂದು ಆರಂಭವಾಗುವುದರೊಳಗೆ ಟಿ. ಟಿ. ಕೆ. ರಾಜಿನಾಮೆ ಕೊಡುವರೆ? ಟಿ. ಟಿ. ಕೆ. ರಾಜೀನಾಮೆ ಕೊಟ್ಟನಂತರ ನೆಹರೂರವರೇ ಅರ್ಥಸಚಿವಶಾಖೆಯನ್ನು ವಹಿಸಿಕೊಂಡು ಈ ಬಾರಿ ಬಜೆಟ್ ಸಲಹೆ ಮಂಡಿಸುವರೆಂದೂ ವದಂತಿ ಹಬ್ಬಿದೆ. ವದಂತಿಗಳು ವದಂತಿಯಾಗಿ ಉಳಿಯದಂತೆ ಟಿ. ಟಿ. ಕೆ. ಕೂಡಲೇ ರಾಜಿನಾಮೆ ಈಯಲಿ. ಪಾರ್ಲಿಮೆಂಟ್ ಅಧಿವೇಶನಕ್ಕೆ ಮುನ್ನ ಅವರು ಹಾಗೆ

(೯ನೇ ಪುಟ ನೋಡಿ)

ವಿಯೆತ್‌ನಾಮಿ ಅಧ್ಯಕ್ಷ ಹೋ-ಚಿ-ಮಿನ್ಹ್

ಹೋ-ಚಿ-ಮಿನ್ಹ್‌ರವರು 1890 ರ ಮೇ ದಿನಾಂಕ 19ರಂದು ಜನ್ಮವೆತ್ತಿದರು. 'ನ್ಗೂಯೆನ್-ಆಯ್-ಕ್ವೋಕ್' ಎಂಬುದು ಅವರ ನಿಜವಾದ ಹೆಸರು. 'ಹೋ-ಚಿ-ಮಿನ್ಹ್' ಎಂಬುದು (ವಿಯೆತ್‌ನಾಮಿ ಭಾಷೆಯಲ್ಲಿ ಚುರುಕು ಬುದ್ಧಿಯವ ಎಂದು ಅದರ ಅರ್ಥ) ಅವರಿಗೆ (ಕಮ್ಯೂನಿಸ್ಟ್) ಪಾರ್ಟಿಯಲ್ಲಿ ಕೊಡಲಾದ ಗುಪ್ತನಾಮವಾಗಿದೆ.

ಹೋ-ಚಿ-ಮಿನ್ಹ್‌ರವರು ಸುಪ್ರಸಿದ್ಧ ವಿಯೆತ್‌ನಾಮಿ ಕ್ರಾಂತಿಕಾರರಾಗಿದ್ದರು. ಇಂಡೋಚೀಣದ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪಕರೂ, ವಿಯೆತ್‌ನಾಮ್ ಲಾವೋದೋಂಗ್ ಪಕ್ಷದ ನಾಯಕರೂ, ಮತ್ತು ವಿಯೆತ್‌ನಾಮ್ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರದ ಪ್ರಥಮಾಧ್ಯಕ್ಷರೂ, ಅವರೇ ಆಗಿದ್ದಾರೆ. ಅವರು ಹುಟ್ಟಿದುದು ಕಿಮ್‌ಲಿಯೆನ್ ಎಂಬ ಹಳ್ಳಿಯಲ್ಲಿ (ಮಧ್ಯ ವಿಯೆತ್‌ನಾಮಿನ ನ್ಘೆ-ಆನ್ ಪ್ರಾಂತದಲ್ಲಿ).

1913 ರಿಂದ 1916 ರವರೆಗೆ ಅವರು ಫ್ರೆಂಚ್ ಮತ್ತು ಬ್ರಿಟಿಷ್ ವಾಣಿಜ್ಯ ನೌಕೆಗಳ ಮೇಲೆ, ನಾವಿಕರಾಗಿಯೋ ಅಥವ ಕಾರ್ಮಿಕರಾಗಿಯೋ ಕೆಲಸ ಮಾಡಿದರು. 1916—17ರ ಕಾಲಾವಧಿಯಲ್ಲಿ ಅವರು ಇಂಗ್ಲೆಂಡಿನಲ್ಲಿಯೂ, 1917-19ರ ಕಾಲಾವಧಿಯಲ್ಲಿ ಅಮೆರಿಕದ ಸಂಯುಕ್ತ ರಾಜ್ಯಗಳಲ್ಲಿಯೂ, ಮತ್ತು 1919 ರಲ್ಲಿ ಫ್ರಾನ್ಸಿನಲ್ಲಿಯೂ ವಾಸಿಸುತ್ತಿದ್ದರು. ವರ್ಸಾಯಿ (ಲೆಸ್) ನಗರದಲ್ಲಿ ಶಾಂತಿ-ಸಮ್ಮೇಳನವು ನಡೆದಾಗ, ಇಂಡೋಚೀಣದ ಜನಾಂಗಗಳಿಗೆ ಸ್ವಾತಂತ್ರ್ಯವನ್ನು ಕೋರುತ್ತಾ, ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳಿಗೆ ಅವರು ಒಂದು ಜ್ಞಾಪಕ ಪತ್ರವನ್ನು ಕಳಿಸಿದಾಗ, ಅವರ ಹೆಸರು ವಿಯೆತ್‌ನಾಮಿನಲ್ಲೆಲ್ಲೆಡೆಯೂ ಪ್ರಖ್ಯಾತವಾಗಿದ್ದಿತು. (ವಿಯೆತ್‌ನಾಮಿ ಭಾಷೆಯಿಂದ ಅನುವಾದಿಸಿದಲ್ಲಿ, 'ನ್ಗೂಯೆನ್-ಆಯ್-ಕ್ವೋಕ್' ಎಂದರೆ 'ದೇಶಭಕ್ತ ನ್ಗೂಯೆನ್' ಎಂದು ಅರ್ಥವಾಗುತ್ತದೆ.)

1921ರ ಡಿಸೆಂಬರ್ ತಿಂಗಳಲ್ಲಿ, ಫ್ರೆಂಚ್ ವಸಾಹತುಗಳ ಶ್ರಮಿಕ ಜನರ ಹೆಸರಿನಲ್ಲಿ ಅವರು, ಫ್ರೆಂಚ್ ಸಮಾಜವಾದೀ ಪಕ್ಷದ ಮಹಾ ಸಭೆಯಲ್ಲಿ ಭಾಗವಹಿಸಿದರು. ಈ ಮಹಾ ಸಭೆಯಲ್ಲಿಯೇ ಫ್ರೆಂಚ್ ಸಮಾಜವಾದೀ ಪಕ್ಷವು ಎರಡು ಪಂಗಡಗಳಾಗಿ ಭಾಗವಾಯಿತು. ಮತ್ತು ಫ್ರೆಂಚ್ ಕಮ್ಯೂನಿಸ್ಟ್ ಪಕ್ಷವು ಸ್ಥಾಪಿತವಾಯಿತು. ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪನೆಯಾದೊಡನೆಯೇ ಹೋ-ಚಿ-ಮಿನ್ಹ್‌ರವರು ಅದಕ್ಕೆ ಸೇರಿದರು. ಪ್ಯಾರಿಸ್ ನಗರದಲ್ಲಿ ಹೋ-ಚಿ-ಮಿನ್ಹ್‌ರವರು ಫ್ರೆಂಚ್ ವಸಾಹತು ನೀತಿಯನ್ನು ಬಹಿರಂಗ ಪಡಿಸುವ ಉದ್ದೇಶದಿಂದಲೇ 'ಪಾರಿಯಾ' ಎಂಬ ಹೆಸರಿನ ವರ್ತಮಾನ ಪತ್ರಿಕೆಯೊಂದನ್ನು ಪ್ರಕಟಿಸುತ್ತಿದ್ದರು. 'ಇಂಟರ್ ನ್ಯಾಷನಲ್' (ಶ್ರಮಿಕರ ಅಂತರ ರಾಷ್ಟ್ರೀಯ ಸಂಸ್ಥೆ) ಸಂಸ್ಥೆಯ ಐದನೆಯ ಮಹಾ ಸಭೆಯಲ್ಲಿ ಅವರು ಭಾಗವಹಿಸಿದ್ದರು (1924). ತರುವಾಯ 1924-29ರ ಕಾಲಾವಧಿಯಲ್ಲಿ ಅವರು ಕ್ವಾಂಗ್ ತುಂಗ್ ನಗರದಲ್ಲಿ (ಚೀಣಾ), ಕಮ್ಯೂನಿಸ್ಟ್ ಧೋರಣೆಯನ್ನು ಹೊಂದಿದ್ದ ಪ್ರಥಮ ವಿಯೆತ್‌ನಾಮಿ ಕ್ರಾಂತಿಕಾರೀ ಸಂಘಟನೆಯನ್ನು ಸ್ಥಾಪಿಸಿದ್ದರು. ಹೊರದೇಶದಲ್ಲಿ ನೆಲೆಸಿದ್ದ ವಿಯೆತ್‌ನಾಮಿ ಕ್ರಾಂತಿಕಾರರನ್ನೊಳಗೊಂಡಿದ್ದ ಈ ಸಂಘಟನೆಯನ್ನು "ವಿಯೆತ್—ನಾಮ್ ಕಾಚ್ ಮಾಂಗ್ ದೋಂಗ್ ಚಿ ಹೋಯ್" (ವಿಯೆತ್—ನಾಮ್ ಕ್ರಾಂತಿಕಾರೀ ಯುವಕರ ಪಕ್ಷ) ಎಂದು ಕರೆಯಲಾಯಿತು. 1927—29 ರ ಕಾಲಾವಧಿಯಲ್ಲಿ ಅವರು ಯೂರೋಪಿನಲ್ಲಿಯೂ ಏಷಿಯದಲ್ಲಿಯೂ ಬೇರೆ ಬೇರೆ ದೇಶಗಳಲ್ಲಿ ವಾಸಿಸುತ್ತಿದ್ದರು ಆಗಲೂ ಕೂಡ ಅವರು ಇಂಡೋ-ಚೀಣದ ಕ್ರಾಂತಿಕಾರೀ ಸಂಘಟನೆಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. 1929ರಲ್ಲಿ ಫ್ರೆಂಚ್ ವಸಾಹತುವಾದೀ ಆಡಳಿತಾಧಿಕಾರ ವರ್ಗ ಹೋ-ಚಿ-ಮಿನ್ಹ್‌ರವರಿಗೆ – ಅವರ ಗೈರು ಹಾಜರಿಯಲ್ಲಿಯೇ, – ಮರಣದಂಡನೆಯನ್ನು ವಿಧಿಸಿತು.

ಇಂಡೋ-ಚೀಣದಲ್ಲಿದ್ದ 3 ಕಮ್ಯೂನಿಸ್ಟ್ ಸಂಘಟನೆಗಳನ್ನು ಅವರು ತಮ್ಮ ಸ್ವಪ್ರಯತ್ನದಿಂದಲೇ 1930ರಲ್ಲಿ ಜನವರಿ ತಿಂಗಳಲ್ಲಿ ಒಂದುಗೂಡಿಸಿ, ಇಂಡೋ-ಚೀಣದ ಕಮ್ಯೂನಿಸ್ಟ್ ಪಾರ್ಟಿಯನ್ನು ರೂಪಿಸಿದರು. 1931ರಲ್ಲಿ ಹಾಂಗ್‌ಕಾಂಗ್ ನರದಲ್ಲಿ ಬ್ರಿಟಿಷ್ ಪೋಲೀಸರು ಹೋ-ಚಿ-ಮಿನ್ಹ್‌ರವರನ್ನು ಕೈದು ಮಾಡಿ, ಅವರಿಗೆ ಎರಡು ವರ್ಷಗಳ ಕಾರಸ್ಥಾನವನ್ನು ವಿಧಿಸಿದರು. ಸೆರೆಮನೆಯಿಂದ ಹೊರಬಂದೊಡನೆಯೇ ಹೋ-ಚಿ-ಮಿನ್ಹ್‌ರವರು ರಹಸ್ಯ ಜೀವಿತವನ್ನು ಕಳೆಯಬೇಕಾಯಿತು, ಹೆಸರನ್ನು ಬದಲಾಯಿಸಿಕೊಳ್ಳಬೇಕಾಯಿತು. 1934ರಲ್ಲಿ ಅವರು ಯೂರೋಪಿಗೆ ಹೋಗಬೇಕಾಯಿತು. 1935ರಲ್ಲಿ ಅವರು "ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್" ಸಂಸ್ಥೆಯ ಏಳನೆಯ ಮಹಾ ಸಭೆಯಲ್ಲಿ ಭಾಗವಹಿಸಿದರು. 1939ರಲ್ಲಿ ಹೋ-ಚಿ-ಮಿನ್ಹ್‌ರು ತಮ್ಮ ಸ್ವದೇಶಕ್ಕೆ ಮರಳಿ ಬಂದರು. 1941ರಲ್ಲಿ ಅವರ ನಾಯಕತ್ವದಡಿಯಲ್ಲಿ, ಇಂಡೋ-ಚೀಣದ ಕಮ್ಯೂನಿಸ್ಟ್ ಪಾರ್ಟಿಯು ರಾಜಕೀಯ ಪಕ್ಷಗಳನ್ನೂ ಮತ್ತು ದೇಶಪ್ರೇಮಿ ಸಂಘಟನೆಗಳನ್ನು ಒಂದುಗೂಡಿಸಿ ವಿಯೆತ್‌ನಾಮಿನ ಸ್ವಾತಂತ್ರ್ಯದ ಸಲುವಾಗಿ ಹೋರಾಡುವ ಪ್ರಜಾಪ್ರಭುತ್ವವಾದೀ ಸಂಯುಕ್ತ ರಂಗವೊಂದನ್ನು ರಚಿಸಿತು. ಈ ಸಂಯುಕ್ತ ರಂಗಕ್ಕೆ "ವಿಯೆತ್-ನಾಮ್ ಡೋಕ್-ಲಾಪ್ ಡೋಂಗ್-ಮಿನ್ಹ್" (ಸ್ವಾತಂತ್ರ್ಯ ಸಲುವಾಗಿರುವ ವಿಯೆತ್-ನಾಮ್ ಮೈತ್ರೀ ಕೂಟ) ಎಂದು ಹೆಸರಿಡಲಾಯಿತು. "ವಿಯೆತ್-ಮಿನ್ಹ್" ಎಂಬುದು ಈ ಹೆಸರಿನ ಸಂಕ್ಷಿಪ್ತ ರೂಪವಾಗಿದೆ. ಹೋ-ಚಿ-ಮಿನ್ಹ್ ಸಂಯುಕ್ತ ರಂಗದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಕಮ್ಯೂನಿಸ್ಟರ ನಾಯಕತ್ವದಡಿಯಲ್ಲಿ, ಜಪಾನೀ ಮತ್ತು ಫ್ರೆಂಚ್ ಆಕ್ರಮಣಕಾರರ ವಿರೋಧವಾಗಿ ನಡೆಯುತ್ತಿದ್ದ ಸಂಘರ್ಷದ ಕಾರ್ಯಗತಿಯಲ್ಲಿ, "ವಿಮೋಚನಾ ಸೈನ್ಯದ" ಸಾಯುಧ ದಳಗಳನ್ನೂ ನಿರ್ಮಿಸಲಾಯಿತು. 1944ರಲ್ಲಿಯೂ ಮತ್ತು 1945ರಲ್ಲಿಯೂ ವಿಯೆತ್-ಬಾಕ್‌ನಲ್ಲಿ (ಉತ್ತರ ವಿಯೆತ್-ನಾಮಿನ ಪರ್ವತ ಪ್ರಾಂತದಲ್ಲಿ) ಒಂದು ವಿಮುಕ್ತ ಕ್ಷೇತ್ರವು ನಿರ್ಮಿಸಲ್ಪಟ್ಟಿತು.

1945ರ ಆಗಸ್ಟ್ ತಿಂಗಳಲ್ಲಿ ವಿಯೆತ್‌ನಾಮೀ ಜನರು ಸಶಸ್ತ್ರ ಬಂಡಾಯವೊಂದನ್ನು ನಡೆಸಿ, ಜಪಾನಿನ ಫಾಸಿಸ್ಟರ ಮತ್ತು ಅವರ ಹಸ್ತಕರ ಪ್ರಾಬಲ್ಯವನ್ನು ತೊಡೆದು ಹಾಕಿದರು. 1945ರ ಆಗಸ್ಟ್ ದಿನಾಂಕ 25ರಂದು ಹೋ-ಚಿ-ಮಿನ್ಹ್‌ರವರ ನಾಯಕತ್ವದಲ್ಲಿ ತಾತ್ಕಾಲಿಕ ಸರಕಾರವೊಂದನ್ನು ನೆಲೆಗೊಳಿಸಲಾಯಿತು.

೧೯೪೫ರ ಸೆಪ್ಟೆಂಬರ್ ತಿಂಗಳಲ್ಲಿ ವಿಯೆತ್-ನಾಮಿನ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರದ ಸ್ಥಾಪನೆಯನ್ನು ಈ ಸರಕಾರವು ಘೋಷಿಸಿತು. ೧೯೪೬ರ ಮಾರ್ಚ್ ತಿಂಗಳಲ್ಲಿ ನಡೆದ ರಾಷ್ಟ್ರೀಯ ವಿಧಾನಸಭೆಯ ಮೊದಲನೆಯ ಅಧಿವೇಶನದಲ್ಲಿ ಹೋ-ಚಿ-ಮಿನ್ಹ್‌ರವರು ರಾಷ್ಟ್ರಾಧ್ಯಕ್ಷರಾಗಿಯೂ ಮತ್ತು ಪ್ರಧಾನ ಮಂತ್ರಿಯವರಾಗಿಯೂ ಚುನಾಯಿತರಾದರು. ೧೯೪೬ರಲ್ಲಿ ಹೋ-ಚಿ-ಮಿನ್ಹ್‌ರವರ ನಾಯಕತ್ವದಲ್ಲಿದ್ದ ಒಂದು ವಿಯೆತ್-ನಾಮಿ ಪ್ರತಿನಿಧಿ ಮಂಡಲವು, ಫ್ರೆಂಚ್, ಸರಕಾರದೊಡನೆ ಸಂಧಾನಗಳನ್ನು ನಡೆಸಿತು; ಮತ್ತು ಎರಡು ಒಡಂಬಡಿಕೆಗಳಿಗೆ (ಅನುಕ್ರಮವಾಗಿ ಮಾರ್ಚ್ ದಿನಾಂಕ ೬ರಂದೂ ಮತ್ತು ಸೆಪ್ಟೆಂಬರ್ ದಿನಾಂಕ ೧೪ರಂದೂ) ಹಸ್ತಾಕ್ಷರಗಳನ್ನು ಮಾಡಿತು. ಈ ಒಡಂಬಡಿಕೆಗಳ ಪ್ರಕಾರ, ವಿಯೆತ್-ನಾಮಿನ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರದ ಸ್ವಾತಂತ್ರ್ಯಕ್ಕೆ ಫ್ರಾನ್ಸ್ ದೇಶವು ಮನ್ನಣೆಯನ್ನಿತ್ತಿತು. ಆದರೆ ೧೯೪೬ರ ಡಿಸೆಂಬರ್ ತಿಂಗಳಲ್ಲಿಯೇ, ಫ್ರೆಂಚ್ ವಸಾಹತುವಾದಿಗಳು ದುರಾಕ್ರಮಣಕಾರೀ ಯುದ್ಧವನ್ನು ಪ್ರಾರಂಭಿಸಿದರು. ಹೋ-ಚಿ-ಮಿನ್ಹ್‌ರವರ ಅಗ್ರ ನಾಯಕತ್ವವನ್ನು ಪಡೆದಿದ್ದ ವಿಯೆತ್-ನಾಮ್ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರ ಸರಕಾರದ ನೇತೃತ್ವದಲ್ಲಿ, ವಿಯೆತ್-ನಾಮೀ ಜನತೆಯು ದುರಾಕ್ರಮಣಕಾರರ ವಿರೋಧವಾಗಿ ದೀರ್ಘಕಾಲಾವಧಿಯವರೆಗೆ ಹೋರಾಟವನ್ನು ನಡೆಸಿದರು. ೧೯೫೧ರ ಫೆಬ್ರವರಿ ತಿಂಗಳಲ್ಲಿ ವಿಯೆತ್‌ನಾಮ್ ಲಾವೊದೋಂಗ್ ಪಕ್ಷವನ್ನು ಸ್ಥಾಪಿಸಲಾಯಿತು. ಹೋ-ಚಿ-ಮಿನ್ಹ್‌ರವರು ಈ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾದರು. ವಿಯೆತ್-ನಾಮ್ ಲಾವೊ ದೋಂಗ್ ಪಾರ್ಟಿಯ ನೇತೃತ್ವದಲ್ಲಿ, ೧೯೫೧ರ ಮಾರ್ಚ್ ತಿಂಗಳಲ್ಲಿ 'ವಿಯೆತ್-ಮಿನ್ಹ್' ಮತ್ತು 'ಲಿಯೆನ್-ವಿಯೆತ್' ಎಂಬೀ ಎರಡು ಸಾಮುದಾಯಿಕ ಸಂಘಟನೆಗಳು, ಲಿಯೆನ್-ವಿಯೆತ್ ಎಂದು ಕರೆಯಲಾದ ವಿಯೆತ್-ನಾಮ್ ರಾಷ್ಟ್ರೀಯ ಸಂಯುಕ್ತರಂಗವಾಗಿ ಒಂದುಗೂಡಿಸಲ್ಪಟ್ಟುವು. ಹೋ-ಚಿ-ಮಿನ್ಹ್‌ರವರು ಈ ಲಿಯೆನ್-ವಿಯೆತ್ ಸಂಯುಕ್ತ ರಂಗದ ಗೌರವಯುತ ಅಧ್ಯಕ್ಷರಾಗಿ ಚುನಾಯಿತರಾದರು. ವಿಯೆತ್‌ನಾಮ್ ಲಾವೋ ದೋಂಗ್ ಪಾರ್ಟಿಯ ನೇತೃತ್ವದಡಿಯಲ್ಲಿ, ಲಿಯೆನ್-ವಿಯೆತ್ ಸಂಯುಕ್ತರಂಗದಲ್ಲಿ ಒಂದುಗೂಡಿರತಕ್ಕ ವಿಯೆತ್‌ನಾಮಿ ಜನತೆಗಳು ದೀರ್ಘಕಾಲಾವಧಿಯ ಪ್ರತಿಭಟನಾ ಹೋರಾಟದಲ್ಲಿ ಮಹತ್ತರ ವಿಜಯಗಳನ್ನು ಸಾಧಿಸಿಕೊಂಡಿದ್ದಾರೆ. ಇಂಡೋಚೀಣದಲ್ಲಿ ಯುದ್ಧಕಾರ್ಯಾಚರಣೆಗಳನ್ನು ನಿಲ್ಲಿಸುವುದರ ವಿಷಯದಲ್ಲಿ, ಜಿನೀವಾ ಸಮ್ಮೇಳನದಲ್ಲಿ (೧೯೫೪ರ ಮಾರ್ಚ್ ತಿಂಗಳಿನಿಂದ ಜುಲೈ ತಿಂಗಳವರೆಗೆ ನಡೆದ ಸಮ್ಮೇಳನದಲ್ಲಿ) ಹಸ್ತಾಕ್ಷರಗೊಂಡ ಒಡಂಬಡಿಕೆಗಳು ಶಾಂತಿ ಶಕ್ತಿಗಳ ಒಂದು ಮಹತ್ತರ ವಿಜಯವಾಗಿ ಘಟಿತವಾಗಿದ್ದುವು. ಅದೇ ವೇಳೆಯಲ್ಲಿ ಈ ಒಡಂಬಡಿಕೆಗಳು, ವಿಮೋಚನೆಯ ಸಲುವಾಗಿಯೂ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ಸಲುವಾಗಿಯೂ ಕೆಚ್ಚೆದೆಯ ಹೋರಾಟವನ್ನು ನಡೆಸಿದ್ದ ವಿಯೆತ್‌ನಾಮಿ ವೀರಜನತೆಯ ರಾಷ್ಟ್ರೀಯ ಹಕ್ಕುಗಳಿಗೆ ಯೋಗ್ಯ ಮನ್ನಣೆಯನ್ನಿತ್ತುವು. ಶಾಂತಿಯು ಪುನಃ ಸ್ಥಾಪಿತವಾದ ತರುವಾಯ ಲಾವೋ-ದೋಂಗ್ ಪಾರ್ಟಿಯ ನೇತೃತ್ವದಡಿಯಲ್ಲಿ ವಿಯೆತ್‌ನಾಮಿ ಜನತೆಯು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಜಯಪ್ರದವಾಗಿ ಪೂರ್ವಸ್ಥಿತಿಗೆ ತಂದುಕೊಳ್ಳಲಾರಂಭಿಸಿದ್ದಾರೆ ಮತ್ತು ತಮ್ಮ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸತೊಡಗಿದ್ದಾರೆ. ಜಮೀನು ಸುಧಾರಣೆಯ ಕಾರ್ಯಕ್ರಮವು ಮೂಲಭೂತವಾಗಿ ಜಯಪ್ರದವಾಗಿದೆ. ಅಧ್ಯಕ್ಷ ಹೋ-ಚಿ-ಮಿನ್ಹ್‌ರವರ ಅಗ್ರನಾಯಕತ್ವದಲ್ಲಿರುವ, ವಿಯೆತ್‌ನಾಂ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರದ ಸರಕಾರವು, ಶಾಂತಿಯ ಕ್ರೋಢೀಕರಣದ ನೀತಿಯನ್ನು ಎಡೆಬಿಡದೆ ಅನುಷ್ಠಾನದಲ್ಲಿ ಅನುಸರಿಸುತ್ತ ಬರುತ್ತಿದೆ, ಜಿನೀವಾ ಸಮ್ಮೇಳನದ ನಿರ್ಣಯಗಳನ್ನು ನೆರವೇರಿಸುತ್ತಾ ಬಂದಿದೆ, ಮತ್ತು ಶಾಂತಿಯುತ ಸಾಧನಗಳಿಂದಲೂ, ಪ್ರಜಾಪ್ರಭುತ್ವವಾದಿ ಸೂತ್ರಗಳ ತಳಹದಿಯ ಮೇಲೆಯೂ, ರಾಷ್ಟ್ರೀಯ ಪುನರೇಕೀಕರಣದ ಸಲುವಾಗಿ ಹೋರಾಡುತ್ತ ಬಂದಿದೆ.

1955 ರ ಬೇಸಗೆಯಲ್ಲಿ ಅಧ್ಯಕ್ಷ

(೫ನೇ ಪುಟ ನೋಡಿ)

> **ಡಾ॥ ಹೋ-ಚಿ-ಮಿನ್ಹ್‌ರಿಗೆ ಸ್ವಾಗತ**
>
> ವಿಯೆತ್‌ನಾಮಿನ ಅಧ್ಯಕ್ಷ ಡಾ॥ ಹೋ-ಚಿ-ಮಿನ್ಹ್‌ರವರು ಈಗ ಭಾರತಕ್ಕೆ ಆಗಮಿಸಿ ಪ್ರವಾಸ ನಡೆಸುತ್ತಿದ್ದಾರೆ. ಅವರು ಬೆಂಗಳೂರಿಗೆ ಈ ಸಂದರ್ಭದಲ್ಲಿ ಇದೇ ತಿಂಗಳ 11ರಂದು ಭೇಟಿ ಕೊಡಲಿದ್ದಾರೆ. ಅವರ ಪ್ರವಾಸ ಯಶಸ್ವಿಯಾಗಲೆಂದು ಹಾರೈಸುತ್ತೇವೆ ಬೆಂಗಳೂರಿನ ನಾಗರಿಕರ ಆದರದ ಸ್ವಾಗತ ಅವರಿಗೆ ಸಿದ್ಧವಿದೆ. ಡಾ॥ ಹೋ-ಚಿ-ಮಿನ್ಹ್‌ರವರ ಕ್ರಾಂತಿಪೂರ್ಣ ಜೀವನದ ಸೂಕ್ಷ್ಮಪರಿಚಯವನ್ನು ನಮ್ಮ ಓದುಗರಿಗೆ ಈ ಲೇಖನದಲ್ಲಿ ಕೊಡಲಾಗಿದೆ. —ಸಂ.

★ ನಿಜವಾದ ಪ್ರಜಾಪ್ರಭುತ್ವ ಅಥವಾ

ಜನತೆಯ ಸ್ಫೂರ್ತಿಯುತ ಬೆಂಬಲವಿಲ್ಲದಿರುವುದೇ

ಸಾಮುದಾಯಿಕ ಯೋಜನೆಗಳ ದುರಂತ!

ಇ. ಎಂ. ಎಸ್. ನಂಬೂದಿರಿಪಾದ್

ಸಮಾಜ ವಿಕಾಸ ಯೋಜನೆಯ ಚಳವಳಿಯು ಆರಂಭವಾಗಿ 5 ವರುಷ ಮುಗಿದಿದೆ. ಇದರ ಮೇಲೆ ಹಲವು ವಿಮರ್ಶೆಗಳು ಬಂದಿವೆ. ಕೆಲವರು 'ಇದು ಗ್ರಾಮಾಂತರ ಪ್ರದೇಶಗಳಲ್ಲಿ ಮೌನ ಕ್ರಾಂತಿಯನ್ನು ತರುತ್ತಿದೆ' ಎಂದು ಹೊಗಳಿದ್ದಾರೆ. ಇನ್ನು ಕೆಲವರು ಇದರ ಉಪಯೋಗವನ್ನೇ ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. ಈ ಸಮಾಜಕಲ್ಯಾಣ ಯೋಜನೆಯ ವಿಷಯವಾಗಿ ವಿಚಾರಣಾ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯ ವರದಿಯನ್ನು ಸರ್ವರೂ ಕಾತುರತೆಯಿಂದ ಕಾದಿರುವುದು ಸಹಜವೇ!

ಸಮಿತಿಯು ನಿರ್ಭೀತವಾಗಿ, ಈ ಯೋಜನೆಯ ಅನುಷ್ಠಾನದ ವಿಷಯವಾಗಿ, ಸತ್ಯವನ್ನೇ ನುಡಿದಿರುವುದು ಅಭಿನಂದನೀಯ. 'ಸಮಾಜ ಕಲ್ಯಾಣ ಯೋಜನೆ ಮತ್ತು ರಾಷ್ಟ್ರೀಯ ವಿಕಾಸ ಯೋಜನೆಗಳ **ಅತ್ಯಂತ ಅಯಶಸ್ವಿ ಅಂಶವೆಂದರೆ** ಅದು ಸ್ಥಳೀಯ ಜನತೆಯ ಸ್ಫೂರ್ತಿಯುತ ಬೆಂಬಲ ಪಡೆಯದಿರುವುದು. ಸ್ಥಳೀಯವಾಗಿ ತಾತ್ಕಾಲಿಕ ಸಮಿತಿಗಳನ್ನೇನೊ ರಚಿಸಲಾಗಿದೆ (ಈ ಸಮಿತಿಗಳಲ್ಲಿ ನೇಮಿತರಾದವರೇ ಇರುವುದು) ಅವು ಸಲಹಾ ಸಮಿತಿಗಳ ರೂಪದಲ್ಲಿದೆ; ಆದರೂ ಈ ಸಮಿತಿಗಳು ಬೆನ್ನೆಲುಬಿಲ್ಲದ, ನಾಯಕತ್ವ ಕೊಡಲು ಶಕ್ತಿಸಾಲದ ಕಾರಣ ಗ್ರಾಮ ಪ್ರದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕಾರ್ಯದ ಹಿಂದೆ ಮಹತ್ತರವಾದ ಜನಶಕ್ತಿಯ ಬೆಂಬಲವನ್ನು ಪಡೆಯಲು ಸಾಧ್ಯವಾಗಿಲ್ಲ" ಎಂದು ಸಮಿತಿಯು ಸಾರಿದೆ.

ಮೇಲೆ ಹೇಳಿದ ಈ **"ಅತ್ಯಂತ ಅಯಶಸ್ವಿ"** ಅಂಶವೇ ಅಭಿವೃದ್ಧಿ ಯೋಜನೆಗಳ **'ಗೌಣವಾದ ಅಂಶ'** ಎಂಬುದನ್ನು ಇಲ್ಲಿ ಸೇರಿಸ ಬೇಕಾಗುತ್ತದೆ. ಯಾಕೆಂದರೆ 'ಸಮಾಜ ವಿಕಾಸ ಯೋಜನೆಗಳು ಅತಿ ಹೆಚ್ಚಿನ ಮಹತ್ವ ಉಳ್ಳವುಗಳು. ಇದರಿಂದ ಭೌತಿಕವಾಗಿ ಸಾಧಿಸಲ್ಪಡುವುದಕ್ಕಿಂತಲೂ ಹೆಚ್ಚಾಗಿ, ಸಮಾಜ ಮತ್ತು ವ್ಯಕ್ತಿಯ ಸ್ವಯಂ ನಿರ್ಮಾಣವಾಗುತ್ತದೆ. ಅಲ್ಲದೆ ಆ ವ್ಯಕ್ತಿಯೇ ಹಳ್ಳಿಯ ಹಾಗೂ ವಿಶಾಲಾರ್ಥದಲ್ಲಿ ರಾಷ್ಟ್ರದ ನಿರ್ಮಾತೃವೂ ಆಗುತ್ತಾನೆ.' ಎಂದು, 1952 ನೇ ಯಲ್ಲಿ ಅಭಿವೃದ್ಧಿ ಯೋಜನಾಧಿಕಾರಿಗಳ ಸಮ್ಮೇಳನದಲ್ಲಿ ನೆಹ್ರೂರವರು ನುಡಿದಿರುವುದನ್ನು ಇಲ್ಲಿ ಗಮನಿಸಬೇಕು.

ಇನ್ನು 1956 'ಸಮಾಜ ವಿಕಾಸ ಯೋಜನಾ ವಿಮರ್ಶೆ'ಯಲ್ಲಿ ಹೇಳಿದ್ದನ್ನು ನೋಡೋಣ "ಸರಕಾರದ ಪಾತ್ರ, ಒಂದು ಯುಕ್ತ ಧೋರಣೆಯನ್ನು ಹೊಂದಿ, ರಾಷ್ಟ್ರೀಯ ಘಟ್ಟದಲ್ಲಿ ತಾನು ಯೋಜಿಸಿದ ಕಾರ್ಯಕ್ರಮಗಳನ್ನು ಸಂಘಟಿಸುವುದಾಗಿದೆ. ಎರಡನೆಯದಾಗಿ ಸಮಾಜ ಕೇಂದ್ರ ಮತ್ತು ಸ್ವಯಂಸೇವಕ ಸಂಸ್ಥೆಗಳ ಶಕ್ತಿಯ ಹೊರಗಿರುವ, ತಾಂತ್ರಿಕ ಸಹಾಯ ಹಾಗೂ ಮೂಲ ವಸ್ತುಗಳನ್ನು ಅವುಗಳಿಗೆ ನೀಡುವುದು. ಜನತೆಯ ಮಟ್ಟಿಗೆ ಹೇಳುವುದಾದರೆ ಸಮಾಜ ವಿಕಾಸ ಯೋಜನೆಗಳು ಶೈಕ್ಷಣಿಕ ಹಾಗೂ ಸಂಘಟನಾತ್ಮಕ ಮಹತ್ವವುಳ್ಳದ್ದಾಗಿವೆ. ಶೈಕ್ಷಣಿಕ ಹೇಗೆಂದರೆ- ಇದರಿಂದಾಗಿ ಆರ್ಥಿಕ ಹಾಗೂ ಸಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ಅಡ್ಡಿಯಾಗಿರುವಂಥ ಜನತೆಯ ನಿಲುವು-ಆಚರಣೆಗಳು ಅವರಿಂದ ತೊಲಗಿ ಹೋಗುವಂತಾಗಿವೆ; ಮಾತ್ರವಲ್ಲ ಈ ಯೋಜನೆಗಳಿಗೆ ಸಹಾಯಕವಾಗುವ ಹಾಗೂ ಬದಲಾವಣೆಗಳಿಗೆ ಹೊಂದಿಕೊಳ್ಳುವ ನಿಲುವನ್ನು ಉಂಟು ಮಾಡುವಂತಾಗುತ್ತದೆ.

ಸಂಘಟನಾತ್ಮಕವಾಗಿದೆ ಎನ್ನುವಾಗ- ಜನರಿಗೆ ತಮ್ಮ ಸಾಮಾನ್ಯ ಹಿತಗಳನ್ನು ಐಕ್ಯತೆಯಿಂದ ಉತ್ತಮವಾಗಿ ಸಾಧಿಸಬಹುದು; ಹಾಗೂ ಈಗಿರುವ ಸಂಸ್ಥೆಗಳ ಪುನರ್ಘಟನೆಯೂ ಅಥವಾ ಹೊಸ ಸಂಸ್ಥೆಗಳ ನಿರ್ಮಾಣವೂ ಆಗಿ, ಸ್ವಯಂಸಹಾಯವು ಪರಿಣಾಮಕಾರಿಯಾಗುವಂತೆ ಮತ್ತು ಸರಕಾರಿ ಸೇವಾ ಕಾರ್ಯಗಳಿಗೆ ಯೋಗ್ಯ ದಾರಿ ದೊರಕಿದಂತೆ ಆಗುತ್ತದೆ.

ಈ ಪ್ರಾಮುಖ್ಯವಾದ ವಿಷಯಗಳನ್ನು ಹೇಳುತ್ತಾ, ಇದಕ್ಕೆ ಪರಿಹಾರವಾಗಿ ಪ್ರಜಾಪ್ರಭುತ್ವ ವಿಕೇಂದ್ರೀಕರಣವೇ ಈ ಸಮಸ್ಯೆಗಳಿಗೆ ಮದ್ದು ಎಂದು ಸಮಿತಿಯ ಅಭಿಪ್ರಾಯ ನೀಡಿದೆ.

ಒಂದು ಸುಸಂಘಟಿತ ಪ್ರಜಾಪ್ರಭುತ್ವ ಆಡಳಿತ ಯಂತ್ರವನ್ನು ರಚಿಸಬೇಕು; ಇದರಲ್ಲಿ ಗ್ರಾಮ ಪಂಚಾಯತುಗಳು ಕಾರ್ಯಾಂಗಗಳಾಗಿ, ಮೇಲ್ಮಟ್ಟದಲ್ಲಿ ಜನಪ್ರಿಯ ಸಂಸ್ಥೆಗಳನ್ನು ಹೊಂದಿರಬೇಕು. ಈ ಜನಪ್ರಿಯ ಸಂಸ್ಥೆಗಳು ಆಯಾ ಪ್ರದೇಶದ ಕಂದಾಯ ನ್ಯಾಯಾಂಗ ಮೊದಲಾದವನ್ನೂ ಸರ್ವಸಾಮಾನ್ಯ ಆಡಳಿತೆ ಮತ್ತು, ಅಭಿವೃದ್ಧಿಯನ್ನು ಸಾಧಿಸುವಂತಾಗಬೇಕು.

ಈ ಒಂದು ಪ್ರಜಾಪ್ರಭುತ್ವರೀತಿಯ ಆಡಳಿತಾಂಗವು ಬೇಕೆಂಬುದಕ್ಕೆ ಸಮರ್ಥನೆ ಇದು: 'ಸಮಾಜ ವಿಕಾಸ ಕೇಂದ್ರವು ನೈಜವಾಗಬೇಕಾದರೆ, ಸಮಾಜವು ತನ್ನ ಸಮಸ್ಯೆಗಳನ್ನು ಅರಿಯಬೇಕು, ಜವಾಬುದಾರಿಯನ್ನು ತಿಳಿಯಬೇಕು, ಅತ್ಯಗತ್ಯವಾದ ಅಧಿಕಾರವನ್ನು ತನ್ನ ಪ್ರತಿನಿಧಿಗಳ ಮುಖಾಂತರ ಚಲಾಯಿಸಬೇಕು ಮತ್ತು ಸ್ಥಳೀಯ ಆಡಳಿತೆಯ ಮೇಲೆ ಸದಾ ತೆರೆದ ಕಣ್ಣು ಮತ್ತು ಬುದ್ಧಿವಂತಿಕೆಯ ಕಾವಲನ್ನು ಇಡುವಂತಾಗಬೇಕು.' ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವವಾಗಿ ಚುನಾಯಿತ ಅಂಗಗಳು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾತ್ರವಲ್ಲ ಸ್ಥಳೀಯವಾಗಿಯೂ ರಚಿಸಲ್ಪಡಬೇಕು.

ಆಡಳಿತೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಬೆಳೆಸಬೇಕು ಎಂಬುದನ್ನು ಅಪೇಕ್ಷಿಸುವವರು ಇದನ್ನು ಸ್ವಾಗತಿಸುವುದು ಖಂಡಿತ; ಹಾಗೂ ಪಂಚಾಯತ್, ಮುನಿಸಿಪಾಲಿಟಿ ಮೊದಲಾದ ಸ್ಥಳೀಯ ಆಡಳಿತ ಸಂಸ್ಥೆಗಳ ಅಧಿಕಾರ ಹೆಚ್ಚಾಗಬೇಕೆಂದು ಇಚ್ಛಿಸುವ ಸಂಸ್ಥೆ ಮತ್ತು ವ್ಯಕ್ತಿಗಳು ಈ ಬಗ್ಗೆ ತೀವ್ರವಾಗಿ ಚರ್ಚಿಸುವುದು ನಿಜ. ಆದರೆ ಈ ಪ್ರಜಾಪ್ರಭುತ್ವ ವಿಕೇಂದ್ರೀಕರಣದ ವಿಷಯ ಯೋಚಿಸುವಾಗ, ಇದಕ್ಕೆ ಸಂಬಂಧಪಟ್ಟ ಒಂದು ಮುಖ್ಯ ಪ್ರಶ್ನೆ ಏಳುತ್ತದೆ. ಅದು, ಕೇಂದ್ರ ಪಾರ್ಲಿಮೆಂಟನಿಂದ, ಸರಕಾರ ಹಾಗೂ ಗ್ರಾಮಗಳ ವರೆಗೆ ಇಂಥಾ ಪ್ರಜಾಸತ್ತಾತ್ಮಕವಾದ ಚುನಾಯಿತ ಅಂಗಗಳು ರಚಿಸಲ್ಪಟ್ಟರೂ ಕೂಡಾ, ಇದರಿಂದಾಗಿಯೇ ನಿಜವಾದ ಪ್ರಜಾಪ್ರಭುತ್ವಕ್ಕೆ ದಾರಿ ಮಾಡಿದಂತಾಗುವುದೇ? ಎಂಬ ಪ್ರಶ್ನೆ.

ಈ ಬಗ್ಗೆ ಯೋಚಿಸುವಾಗ ಕಳೆದ ಹತ್ತು ವರುಷಗಳ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯಮಟ್ಟದಲ್ಲಿ ಏನೆಲ್ಲಾ ನಡೆದಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಜಿಲ್ಲಾ ಮತ್ತು ಕೆಳಮಟ್ಟದಲ್ಲಿ ಸೂಚಿಸಲಾದ ರೀತಿಯಲ್ಲೆ ಮೇಲ್ಮಟ್ಟದಲ್ಲಿ ಪ್ರಜಾಪ್ರಭುತ್ವವಾಗಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳೇ ಅಧಿಕಾರವನ್ನ ಕೈಯಲ್ಲಿರಿಸಿಕೊಂಡಿರುವವರಾಗಿದ್ದಾರೆ. ಹಿಂದಿನ ಬ್ರಿಟಿಷ್ ನೌಕರಶಾಹಿಯಿಂದ ಜನತೆಯ ಪ್ರತಿನಿಧಿಗಳಿಗೆ ಅಧಿಕಾರ ವರ್ಗಾಯಿಸಲ್ಪಟ್ಟದೆಯೇನೊ ನಿಜ. ಆದರೆ ಇದು, ಎಷ್ಟರಮಟ್ಟಿಗೆ ನಿಜವಾದ ಅಧಿಕಾರದ ಬದಲಾವಣೆ ತಂದಿದೆ? ಇದು, ಜನತೆಯ ಪ್ರತಿನಿಧಿಗಳು ಅಧಿಕಾರವನ್ನು ನಡೆಸುವ ನೈಜಸ್ಥಿತಿಗೆ ತರಲ್ಪಟ್ಟದೆಯೋ ಅಥವಾ ಮಹಾತ್ಮಾ ಗಾಂಧೀಜಿಯವರು ಅಂದಂತೆ **'ಬಿಳಿ ನೌಕರಶಾಹಿಯ ಬದಲು ಕಂದು ನೌಕರಶಾಹಿ' ಯಾಗಿ ಮಾರ್ಪಟ್ಟದೆಯೋ?**

ಇಂದು ನಿಜವಾದ, ದಿನದಿನದ, ಆಡಳಿತೆಯು ವಾಸ್ತವವಾಗಿ ಮಂತ್ರಿಗಳಿಂದಲೂ ಅಲ್ಲ, ಲೋಕಸಭೆ ಮತ್ತು ರಾಜ್ಯಸಭೆಗಳಿಂದಂತೂ ಅಲ್ಲವೆ ಅಲ್ಲ, ಆದರೆ ಶಾಶ್ವತ ಅಧಿಕಾರಿ ವರ್ಗದಿಂದ ನಡೆಸಲ್ಪಡುತ್ತದೆ. ವಿಶಾಲವಾದ ಧೋರಣೆಗಳೆಂಬುದು ಮಾತ್ರ ಮಂತ್ರಿಗಳಿಂದ ನಿರ್ಣಯಿಸಲ್ಪಡುತ್ತವೆ; ಅದಕ್ಕಿಂತಲೂ ವಿಶಾಲವಾದ ಧೋರಣೆಯಿದ್ದರೆ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ತೀರ್ಮಾನಿಸಲ್ಪಡುತ್ತವೆ. ಅಂದರೆ, ಪ್ರತಿಯೊಬ್ಬ ಹೆಣ್ಣು-ಗಂಡಿನ ಜೀವನದ ಮೇಲೆ ಪರಿಣಾಮ ಬೀರುವ ದೈನಂದಿನ ಪ್ರಶ್ನೆಗಳ ಪರಿಹಾರವಾಗಿ ಈ 'ವಿಶಾಲ ಧೋರಣೆ'ಗಳನ್ನು **ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ** ತರುವವರು ಕಾರ್ಯದರ್ಶಿಗಳು-ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲೂ ಮತ್ತು ಇನ್ನೂ ಕೆಳಮಟ್ಟದಲ್ಲೂ ಇರುವ ಅಧಿಕಾರಿಗಳೇ! ಈ ಅಧಿಕಾರಿಗಳು, ಅಂದರೆ ಸರಕಾರದ ಪ್ರಧಾನ ಕಾರ್ಯದರ್ಶಿಯಿಂದ ಹಿಡಿದು ಹಳ್ಳಿಯ ಕಚೇರಿಯ ಗುಮಾಸ್ತೆಯ ಮಾನಸಿಕ ನಿಲುವು ಮತ್ತು ಇವರು ಜನರ ಬಗ್ಗೆ ತೋರುವ ವರ್ತನೆಯನ್ನೇ **'ನೌಕರಶಾಹಿ'** ಎಂದು ಹೇಳಲಾಗುತ್ತದೆ. ಈಗ ಈ ಪ್ರಶ್ನೆ ಬರುತ್ತದೆ: ಈ (ನೌಕರಶಾಹಿ) ನಿಲುವು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಅಂಗಗಳ ರಚನೆಯಿಂದಾಗಿ ಬದಲಾಗಿದೆಯೇ?

ಇದಕ್ಕೆ 'ಇಲ್ಲ' ಎಂಬ ಉತ್ತರ ಕೊಡುವಾಗ ಯಾರು ಹಿಂದೆ ಮುಂದೆ ನೋಡಲಾರರು. ಶಾಸನ ಸಭೆಗಳಲ್ಲಿ ಎಷ್ಟು ಚರ್ಚೆ ನಡೆಯಲಿ, ನಾನಾ ಕಚೇರಿಗಳಲ್ಲಿ ಕುಳಿತಿರುವ ಅಥವಾ ಜಿಲ್ಲೆ ಹಾಗೂ ಹಳ್ಳಿಗಳಲ್ಲಿ ಸಂಚಾರ ಮಾಡುವ ಅಧಿಕಾರಿಗಳು ಸಾಮಾನ್ಯಜನರ ಮೇಲೆ ತೋರುವ ತಿರಸ್ಕಾರಪೂರ್ಣ ವರ್ತನೆಯನ್ನು ಮಾರ್ಪಡಿಸಲು ಶಕ್ತವಾಗಿಲ್ಲ; ಸಾಮಾನ್ಯ ಜನರನ್ನು ಗೋಳಾಡಿಸುವ ಮತ್ತು ಬ್ಲಾಕ್‌ಮೈಲ್ ಮಾಡುವ ಹಾಗೂ ಅವರ ಅಸಹಾಯಕತೆ ದುರ್ಲಾಭವನ್ನು ಪಡೆಯುವ ಅಧಿಕಾರಿಯ ವರ್ತನೆಯು ಪರಿವರ್ತಿತವಾಗಿಲ್ಲ.

ಈ ಪ್ರಜಾಸತ್ತಾತ್ಮಕ ಚುನಾಯಿತ ಅಂಗಗಳಿಂದ ಸಾಮಾನ್ಯ ಮನುಷ್ಯನಿಗೆ ಒಂದು ಲಾಭವಿದೆ; ಆತನಿಗೆ, ಮಂತ್ರಿಗಳ ಅಥವಾ ಶಾಸನ ಸಭಾ ಸದಸ್ಯರ ಮೇಲೆ ಪ್ರಭಾವ ಬೀರುವ ಯಾವನೋ ಒಬ್ಬನ ಪರಿಚಯವಿದ್ದಲ್ಲಿ, ಆತನ ಸಂಕಟಗಳ ಪರಿಹಾರವಾಗಲೂ ಬಹುದು. ಇದು ಬ್ರಿಟಿಷರ ಕಾಲದಲ್ಲಿ ಸಾಧ್ಯವಿದ್ದಿಲ್ಲ, ಆ ಮಟ್ಟಿಗೆ ಇದೊಂದು ಪ್ರಗತಿಯೆನ್ನಬಹುದು. ಆದರೆ ಈ ವಿಶೇಷ ಸವಲತ್ತು ಅಥವಾ ಸಂದರ್ಭ ಎಷ್ಟು ಮಂದಿ ಸಾಮಾನ್ಯ ಜನರಿಗೆ ದೊರಕಬಹುದು? ಹೀಗಾಗಿ ಬಹುತೇಕ ಜನತೆಯು, ಅಧಿಕಾರಿಗಳ ಕೈಯಲ್ಲಿ ಅನ್ಯಾಯವಾಗಿ ಅವಮಾನವನ್ನು ಸಹಿಸುತ್ತಾ ಬರಬೇಕಾಗಿ ಬಂದಿದೆ.

ಆದ ಕಾರಣ ಇಲ್ಲಿ ಈ ಪ್ರಶ್ನೆ ಉದ್ಭವಿಸುತ್ತದೆ: ಇದೇ ವಿಧಾನವನ್ನು, ಕೇಂದ್ರ ಹಾಗೂ ರಾಜ್ಯಮಟ್ಟದಿಂದ ಹಳ್ಳಿಗಳ ವರೆಗೆ ವಿಸ್ತರಿಸಿದರೆ ಸಾಕೆ? ಮೇಲೆ ನಡೆದಂತೆಯೇ ಕೆಳಗೂ ನಡೆಯುವುದಾದರೆ, ಇದರಿಂದಾಗಿ ಪರಿಸ್ಥಿತಿಯು ಸುಧಾರಿಸಲ್ಪಡುವುದೆ? ಅಥವಾ ಪ್ರಜಾಪ್ರಭುತ್ವವನ್ನು ಸಂಪೂರ್ಣ ಹಾಗೂ ವಾಸ್ತವವಾಗಿ ಮಾಡಲು ಹೆಚ್ಚೇನಾದರೂ ಸಾಧಿಸಲು ಸಾಧ್ಯವೇ?

ಇದು, ಪ್ರಜಾಪ್ರಭುತ್ವ ಆಡಳಿತಾಂಗ

ನೌಕರಶಾಹಿಯನ್ನೊಳಗೊಂಡ ಪ್ರಜಾಪ್ರಭುತ್ವ?

ದಲ್ಲಿ ಸರಕಾರಿ ಯಂತ್ರದ ಪಾತ್ರವೇನು ಎಂಬ ವಾದಗ್ರಸ್ತವಾದ ಪ್ರಶ್ನೆಯನ್ನು ಮುಂದೊಡ್ಡುತ್ತದೆ. ಅಧಿಕಾರಿಗಳ ಮೇಲೆ ಪ್ರಜಾಸತ್ತಾತ್ಮಕ ಮೇಲ್ವಿಚಾರಣೆ ಇರಬಾರದೆಂಬುದೇ ನಮ್ಮ ಗಣ ರಾಜ್ಯದ ಸ್ವೀಕೃತ ನೀತಿಯಾಗಿದೆ; ಮತ್ತು ವಿಧಾನ ಸಭೆಗಳ ಸಲಹೆಯನ್ನು ಪಡೆದು ಮಂತ್ರಿಗಳು ನಿರೂಪಿಸುವ ಸಾರ್ವತ್ರಿಕ ಧೋರಣೆಗಳೊಡನೆ ಆರಂಭವಾಗಿ, ಅಷ್ಟರಲ್ಲೇ ಅಂತ್ಯವಾಗುವುದೇ ನಮ್ಮ ಪ್ರಜಾಪ್ರಭುತ್ವದ ಅರ್ಥವಾಗಿದೆ. ಈ ಧೋರಣೆಗಳನ್ನು ಒಮ್ಮೆ ನಿರೂಪಿಸಿದರಾಯಿತು. ಇದರ ಅನುಷ್ಠಾನ ಸಂಪೂರ್ಣವಾಗಿ ಅಧಿಕಾರಿಗಳ ಮೇಲೆ ಬಿಡಲಾಗುವುದು. ಇವುಗಳ ಅನುಷ್ಠಾನ ಕಾರ್ಯವನ್ನು ತಹಬಂದಿಗೆ ಒಳಪಡಿಸುವ ಅಥವಾ ನಿರ್ದೇಶಿಸುವ ಯಾವುದೇ ಪ್ರಯತ್ನ ಮಾಡಿದಲ್ಲಿ, ಅದು ಸರಕಾರಿ ಅಧಿಕಾರಿಗಳಿಗೆ ಮೀಸಲಿಟ್ಟಂತಿರುವ ಆಡಳಿತಾಂಗದಲ್ಲಿ 'ರಾಜಕೀಯ ಪ್ರವೇಶ'ವೆಂದು ಕರೆಯಲ್ಪಡುತ್ತದೆ. ಈ ಸರಕಾರಿ ಅಧಿಕಾರಿಗಳು ಆಡಳಿತ ಕ್ಷೇತ್ರದಲ್ಲಿ ಸರ್ವಶಕ್ತರು ಎಂಬ ನಿಲುವೇ, ಜನಸಮೂಹದೊಡನೆ ಯಾವ ರೀತಿಯಲ್ಲಾ ನಡೆದುಕೊಳ್ಳಬಹುದೆಂಬ ಯೋಚನೆಯನ್ನು ಹುಟ್ಟಿಸುತ್ತದೆ. ಯಾವಾಗ, ಈ ಯೋಚನೆಯನ್ನು ವರ್ಗದ ಅಧಿಕಾರಿ ಮನಸ್ಸಿನಿಂದ ಕಿತ್ತೊಸೆಯಲಾಗುವುದಿಲ್ಲವೋ ಮತ್ತು ಜನತೆ ಹಾಗೂ ಅವರ ಪ್ರತಿನಿಧಿಗಳೇ ಎಲ್ಲಾ ಅಂಶಗಳಲ್ಲೂ ಸರ್ವಶಕ್ತರು ಎಂಬ ತಿಳಿವಳಿಕೆಯು ಅವರಲ್ಲಿ ಎಂದಿನವರೆಗೆ ಮೂಡುವುದಿಲ್ಲವೋ, ಅಷ್ಟರ ತನಕ ನಮಗೆ ನಿಜವಾದ ಪ್ರಜಾಪ್ರಭುತ್ವ ಇರದು. **ಅದು ಬರೀ ನೌಕರಶಾಹಿ-ಪ್ರಜಾಪ್ರಭುತ್ವದ ಅಂಶಗಳನ್ನೊಳಗೊಂಡ ನೌಕರಶಾಹಿ ಮಾತ್ರವಷ್ಟೆ!**

ಆಡಳಿತ ಯಂತ್ರದ ಮೇಲೆ ಇಂಥ ನಿಜವಾದ ಪ್ರಜಾಸತ್ತಾತ್ಮಕ ಹದ್ದುಬಸ್ತು ಇರಬೇಕೆಂಬುದನ್ನು,—ಇದರಿಂದಾಗಿ ಪಕ್ಷೀಯ ಹಾಗೂ ಕೋಮುವಾರು ಮತ್ತಿತರ ಪ್ರಭಾವ ಆಡಳಿತಾಂಗವನ್ನು ಹೊಗುವುದು ಎಂಬ ನೆಪ ಒಡ್ಡಿ-ತಡೆಯಲಾಗುತ್ತಿದೆ. ಈ ಸರಕಾರಿ ಅಧಿಕಾರಿಗಳನ್ನು ರಾಜಕೀಯದಿಂದ ದೂರ ಇರಿಸಬೇಕ; ಯಾಕೆಂದರೆ ಇವರು ಪ್ರತಿಯೊಂದು ಪ್ರಶ್ನೆಗಳನ್ನು ಪಕ್ಷಾತೀತ, ಕೋಮುವಾರು ಭಾವನಾರಹಿತ, ಮತ್ತು ಪಕ್ಷಪಾತರಹಿತ ದೃಷ್ಟಿಯಿಂದ ನೋಡಬೇಕಾಗುತ್ತದೆ. ಆದುದರಿಂದ ಅವರ ದೈನಂದಿನ ಆಡಳಿತ ಕಾರ್ಯದಲ್ಲಿ ಅವರನ್ನು ಅವರಷ್ಟಕ್ಕೆ ಬಿಟ್ಟರೆ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ವಾದಿಸಲಾಗುತ್ತದೆ.

ಆದರೆ ಈ ವಾದಕ್ಕೆ ಪುಷ್ಟಿಯೇ ಇಲ್ಲ. ಅಧಿಕಾರಿಗಳು ರಾಜಕೀಯದ ಹೊರಗಿರಬೇಕು ಎಂದು ಒತ್ತಿ ಹೇಳುವುದರಿಂದ ಮತ್ತು 'ರಾಜಕಾರಣಿಗಳು, ಈ ಮಧ್ಯೆ ಪ್ರವೇಶ' ಮಾಡಬಾರದೆಂದು ಒತ್ತಾಯಿಸುವುದರಿಂದ ಮಾತ್ರ, ಈ ಅಧಿಕಾರಿಗಳನ್ನು ರಾಜಕೀಯದಿಂದ ಮೇಲಿಟ್ಟಂತಾಗುವುದೇ! ಇದು ಸತ್ಯಕ್ಕೆ ಅಪಚಾರ ಎಂದು. ನಾವು ತಿಳಿದಿದ್ದೇವೆ. ರಾಜಕೀಯ ಪಕ್ಷದತ್ತ (ಅದರಲ್ಲೂ ಕಮ್ಯೂನಿಸ್ಟ್ ಪಕ್ಷ) ವೈರಭಾವವನ್ನು ಮಾತ್ರ ತಳೆಯುವುದಷ್ಟೇ ಅಲ್ಲ, ಈ ಸರಕಾರಿ ಅಧಿಕಾರಿಗಳು ತಮ್ಮ ದೈನಂದಿನ ಚಟುವಟಿಕೆಯಲ್ಲಿ ಕೋಮುವಾರು ನಿಲುವನ್ನೇ ಹೊಂದಿರುತ್ತಾರೆಂಬುದು ಸರ್ವವಿದಿತ. ಒಂದು ಮತ ಅಥವಾ ಜಾತಿಗೆ ಸೇರಿದ ಅಧಿಕಾರಿ ತನ್ನ ಜಾತಿಯ ಇಲ್ಲವೇ ಮತದ ವ್ಯಕ್ತಿಯ ಹಿತರಕ್ಷಣೆಗಾಗಿ ತನ್ನ ಅಧಿಕಾರವನ್ನು ಉಪಯೋಗಿಸುವುದು ಸರ್ವಸಾಮಾನ್ಯ ವಿಷಯವಾಗಿದೆ. ಇದನ್ನು ತಿಳಿದೇ ತಾನೇ ಕೇರಳದಲ್ಲಿ (ಇನ್ನಿತರ ಕೆಲವು ರಾಜ್ಯಗಳಲ್ಲೂ) ಪ್ರಧಾನವಾದ ಸ್ಥಾನಕ್ಕೆ ನೌಕರರ ಆಯ್ಕೆಯ ಅಧಿಕಾರವನ್ನು ಆಯಾ ಖಾತೆಯ ಅಧಿಕಾರಿಗಳಿಂದ ಕಿತ್ತು ಪಬ್ಲಿಕ್ ಸರ್ವಿಸ್ ಕಮಿಷನಿಗೆ ಇತ್ತಿರುವುದು; ಅಲ್ಲದೆ ಈ ಕಮಿಷನ್, ಆಯ್ಕೆಯ ಸಮಯದಲ್ಲಿ ಕೋಮುವಾರುವಾಗಿ ಇಷ್ಟೇ ಪ್ರಾತಿನಿಧ್ಯವನ್ನು ನಿರ್ದೇಶಿಸಿರುವುದು! ಈ ನಿಚ್ಚಳ ವಾಸ್ತವತೆಯ ಮುಂದೆ, ಸರಕಾರಿಗಳು ಒಳ್ಳೆಯವರೆಂದೂ, ಮತ್ತು ಅವರನ್ನು ರಾಜಕಾರಣಿಗಳೆಂಬ ದುಷ್ಟ ಜೀವಿಗಳ ಪ್ರವೇಶದಿಂದ ಉಳಿಸಿದರೆ ಅವರು, ಜಾತಿ, ಮತ, ರಾಜಕೀಯ ಪಕ್ಷಗಳ ನಡುವೆ ನ್ಯಾಯದ ತಕ್ಕಡಿಯನ್ನು ಸಮತೂಕವಾಗಿ ಹಿಡಿಯುವರೆಂದೂ ಹೇಳಲು ಯಾವಾತನು ಧೈರ್ಯ ಪಡುವನು?

ಸರಕಾರಿ ನೌಕರರು ಜನತೆಯ ಒಂದು ವಿಭಾಗವೆಂಬ ಸತ್ಯವನ್ನು ನಾವು ಅಂಗೀಕರಿಸದಿರಲು ಸಾಧ್ಯವಿಲ್ಲ. ಹಾಗಿದ್ದಲ್ಲಿ ಜನತೆಯಲ್ಲಿರುವ ಒಳ್ಳೆಯ ಹಾಗೂ ಕೆಟ್ಟ ಗುಣಗಳು ಇವರಲ್ಲೂ ಇವೆ. ಜನತೆ ಜಾತಿ-ಕೋಮುವಾರು, ಅಥವಾ ಪಕ್ಷೀಯ ಭಾವನೆಯುಳ್ಳವರಾದರೆ ಸರಕಾರಿ ನೌಕರರೂ ಅದೇ ಭಾವನೆಯುಳ್ಳವರಾಗಿರುವುದು ಅನಿವಾರ್ಯ. ಹೀಗಿದ್ದೂ, ತಾವು ಈ ಭಾವನೆಗಳಿಂದ ಹೊರತೆಂದು ಇವರೇನೊ ತೋರಿಕೆಗೆ ಸಾರಬಹುದಷ್ಟೆ!

ನಾನು ಈ ಶಾಶ್ವತ ಸರಕಾರಿ ಅಧಿಕಾರಿಗಳ ಎಲ್ಲಾ ಕಾರ್ಯಗಳಲ್ಲೂ, ಜನತೆಯ ಪ್ರತಿನಿಧಿಗಳ ಪ್ರವೇಶ ಹಾಗೂ ತಹಬಂದಿ ಇರಬೇಕೆಂದು ಅನ್ನುವುದಿಲ್ಲ. ಮೇಲಿಂದ ಕೆಳಗಿನ ವರೆಗೆ ಯಾವ ಅಧಿಕಾರಿಯೇ ಆಗಲಿ, ಅವರಿಗೆ ತಮ್ಮ ಉಪಕ್ರಮ ಶಕ್ತಿ ಉಪಯೋಗಿಸುವ ಸ್ವಾತಂತ್ರ್ಯ ಇಲ್ಲದಲ್ಲಿ ಆಡಳಿತೆಯು ನಿಜವಾಗಿ ಪರಿಣಾಮಕಾರಿಯಾಗದು. (ವಾಸ್ತವವಾಗಿ ಹೇಳುವುದಾದರೆ, ಈಗಿನ ಆಡಳಿತ ಯಂತ್ರದ ಪ್ರಧಾನ ನ್ಯೂನತೆಯೆಂದರೆ, ಅಧಿಕಾರಿಗಳಿಗೆ, ಅದರಲ್ಲೂ ಕೆಳಮಟ್ಟದಲ್ಲಿ, ಉಪಕ್ರಮ ಶಕ್ತಿಯನ್ನುಪಯೋಗಿಸುವ ಸ್ವಾತಂತ್ರ್ಯ ಇಲ್ಲದಿರುವುದು ಹಾಗೂ ಅವರ ಮೇಲೆ ಮೇಲಾಧಿಕಾರಿಗಳ ಅಗತ್ಯಕ್ಕೂ ಮಿತಿಮೀರಿದ ಎಡೆಬಿಡದ ತಹಬಂದಿ ಇರುವುದೇ ಆಗಿದೆ). ನಾನು ಸೂಚಿಸುವುದಿಷ್ಟೆ: ಪ್ರಚಲಿತ ಆಡಳಿತೆ ಯಂತ್ರದ ಬಗ್ಗೆ ತಳೆದಿರುವ ಅಭಿಪ್ರಾಯ—ಈ ಶಾಶ್ವತ ಅಧಿಕಾರಿಗಳೇ ಒಂದು ವರ್ಗ, ಇವರನ್ನು ಇವರಷ್ಟಕ್ಕೆ ಬಿಟ್ಟಲ್ಲಿ ಆಡಳಿತೆಯನ್ನು ಸಮರ್ಥವಾಗಿಯೂ, ನಿಷ್ಪಕ್ಷಪಾತವಾಗಿಯೂ ಇವರು ನಡೆಸುತ್ತಾರೆ-ಎಂಬ ಈ ವಿಚಾರ-ಭ್ರಾಂತ ಹಾಗೂ ದೋಷಪೂರ್ಣವಾದುದು.

ಜನತೆಯ ಟೀಕೆ ಹಾಗೂ ತಹಬಂದಿ ಮಂತ್ರಿಗಳಷ್ಟೇ ಈ ಶಾಶ್ವತ ಅಧಿಕಾರಿಗಳಿಗೂ ಪ್ರಾಮುಖ್ಯವಾದುದು. ಎಂತಾದರೂ, ಪ್ರಜಾಪ್ರಭುತ್ವ ನೈಜ ಹಾಗೂ ಪೂರ್ಣವೆಂದಾದರೆ ಜನತೆಯೇ ಸರ್ವಶಕ್ತರು ತಾನೆ! ಈ ಮೂಲಭೂತ ವಿಚಾರವನ್ನು ಒಪ್ಪಿಕೊಂಡಲ್ಲಿ ಹಾಗೂ ಶಾಶ್ವತ ಅಧಿಕಾರಿಗಳ ಪಾವಿತ್ರ್ಯದ ವಿಚಾರವನ್ನು ಎಂದೆಂದಿಗೂ ಕೈಬಿಟ್ಟಲ್ಲಿ, ಆಗ ಜನತೆಯ ಪ್ರತಿನಿಧಿಗಳು ಮತ್ತು ಶಾಶ್ವತ ಅಧಿಕಾರಿಗಳ ಮಧ್ಯೆ ಒಂದು ಸ್ವೀಕೃತವಾಗುವ ಸಂಬಂಧವನ್ನು ರೂಪಿಸಲು ಸಾಧ್ಯವಾಗುವುದು.

"ಪ್ರಜಾಪ್ರಭುತ್ವ ವಿಕೇಂದ್ರಿಕರಣ"ದ ಈ ಒಂದು ಅಂಶದ ಬಗ್ಗೆ ವಿಚಾರಣಾ ಸಮಿಯು ಏನೊಂದು ಹೇಳದಿರುವುದು ಶೋಚನೀಯ. ಆದ ಕಾರಣ, ಪ್ರಜಾಪ್ರಭುತ್ವವನ್ನು ಇನ್ನಷ್ಟು ವಿಸ್ತರಿಸಬೇಕೆಂದೂ, ಪುಷ್ಟಿಗೊಳಿಸಬೇಕೆಂದೂ ಅಪೇಕ್ಷಿಸುವವರು, ಈ ಪ್ರಶ್ನೆಯನ್ನು ತೀವ್ರವಾಗಿ ಪರಿಶೀಲಿಸಿ ಮೇಲೆ ಹೇಳಲಾದ ನ್ಯೂನತೆಗಳನ್ನು ಹೋಗಲಾಡಿಸುವ ಹೊಸ ಹಾದಿ ಹಾಗೂ ಸಾಧ್ಯತೆಗಳನ್ನು ಹುಡುಕಬೇಕಾಗಿದೆ.

ಸರಕಾರಿ ಕ್ಷೇತ್ರಕ್ಕೆ ಟಿ. ಟಿ. ಕೆ.ಯ ದ್ರೋಹ

ಮುಂಧ್ರಾ ಸಂಸ್ಥೆಗೆ ಜೀವವಿಮಾ ಹಣವನ್ನು ಸುರಿದ ಮೋಸದ ಕೊಳೆತ ಮೊಟ್ಟೆ ಒಡೆದು ನಾರುವ ಈ ಸಂದರ್ಭದಲ್ಲಿ ಟಿ. ಟಿ. ಕೆ.ಯ ಜನದ್ರೋಹಿ ನೀತಿಯು ಇನ್ನಷ್ಟು ಹೊರಗೆ ಬಿದ್ದಿದೆ. ಬಂಡವಾಳಶಾಹಿ ಹಾಗೂ ಖಾಸಗಿ ಕ್ಷೇತ್ರದ ಬಂಟತನವನ್ನು ಸ್ವೀಕರಿಸಿದ ಟಿ. ಟಿ. ಕೆ., ಸರಕಾರಿ ಕ್ಷೇತ್ರ ಹಾಗೂ ದೇಶದ ಆರ್ಥಿಕವನ್ನೇ ಬುಡಮೇಲು ಮಾಡುವಂಥಾ ದ್ರೋಹ ಬಗೆದಿರುವುದು ತಿಳಿದು ಬರುತ್ತಿದೆ.

ಭಾರತ ಸರಕಾರಕ್ಕೆ ಸಾಲ ನೀಡದ್ದಕ್ಕಾಗಿ ಅಮೆರಿಕಾದಲ್ಲಿ ಆಡಳಿತೆಯ ಮೇಲೆ ಅಲ್ಲಿನ ಪತ್ರಿಕೆಗಳ ಟೀಕೆ ನಡೆಯುತ್ತಿರುವಾಗ, ಶ್ರೀಮಾನ್ ಟಿ. ಟಿ. ಕೆ. ಯವರು ತನ್ನ ಮಾತುಕತೆಯಲ್ಲಿ ಸರಕಾರಿ ಕ್ಷೇತ್ರಕ್ಕಾಗಿ ಅಲ್ಲ, ಖಾಸಗಿ ಕ್ಷೇತ್ರಕ್ಕಾಗಿ ನಾನು ಡಾಲರ್ ಬಯಸುತ್ತಿದ್ದೇನೆ ಎಂದು ಅಮೆರಿಕನ್ ಸರಕಾರಕ್ಕೆ ಹೇಳಿರುವುದಾಗಿ ಲಂಡನಿನ 'ಇಕಾನೋಮಿಸ್ಟ್' ಜನವರಿ 4ರಂದು ಬರೆದಿದೆ. ಇದು ಸಂಪೂರ್ಣ ಸತ್ಯವೆಂಬುದಾಗಿ ನಮ್ಮ ಆರ್ಥಿಕ ಖಾತೆಯ ಇತ್ತೀಚೆಗಿನ ನಿರ್ಣಯದಿಂದ ತಿಳಿದು ಬರುತ್ತಿದೆ.

ಭಾರತಕ್ಕೆ ಬರುವ ವರ್ಷದಲ್ಲಿ ರೂ. 110 ಕೋಟಿ ಸಾಲವನ್ನು ಕೊಡಲು ಅಮೆರಿಕಾ ತೀರ್ಮಾನಿಸಿದೆ. ಆದರೆ, ಅವರಿಂದ ರೂ. 166 ಕೋಟಿ ಸಾಲ ಆರ್ಥಿಕ ಖಾತೆ ಕೇಳುವುದೆಂದು ತಿಳಿಯಲಾಗಿದೆ ಇದರಲ್ಲಿ ರೂ. 88 ಕೋಟಿ ಖಾಸಗಿ ಕ್ಷೇತ್ರ ಅಂದರೆ ಮುಂಧ್ರಾ ಬಿರ್ಲಾ-ತಾತಾರಂಥಾ ಬಂಡವಾಳಶಾಹಿಗಳ ಜೇಬಿಗೆ ಇಳಿಯುವುದು. ಸರಕಾರೀ ಕ್ಷೇತ್ರದಲ್ಲಿ ಬರೆ 78 ಕೋಟಿ ರೂ ವೆಚ್ಚ ಮಾಡಲಾಗುವುದು. ಹಾಗಾದರೆ ಟಿ. ಟಿ. ಕೆ. ಅಮೆರಿಕಾದಲ್ಲಿ ಡಾಲರ್ ಬಿಕ್ಷೆಗಾಗಿ ಹೋದುದು ಭಾರತದ ಸರಕಾರ ಅಥವಾ ಜನತೆಗಾಗಿ ಅಲ್ಲ, ಇಲ್ಲಿನ ಬಂಡವಾಳಶಾಹಿಗಳಿಗಾಗಿ.

ಮುಂಧ್ರಾರಿಗೆ ಪುನಃ ರೂ. 100 ಲಕ್ಷ

ಇಷ್ಟೇ ಅಲ್ಲ ಮುಂಧ್ರಾರಿಗೆ ವಿಮಾ ಕಂಪೆನಿಯ ಸಾರ್ವಜನಿಕ ಹಣವಾದ 1¼ ಕೋಟಿ ರೂಪಾಯಿಯ ದಾನವಿತ್ತ ಬಳಿಕ, ಈಗ ಅಮೆರಿಕಾದಿಂದ ಬರುವ ಡಾಲರ್ ಸಹಾಯದಲ್ಲಿ ಪಾಲುಗೊಳ್ಳುವ ಖಾಸಗಿ ಉದ್ಯಮಿಗಳಲ್ಲಿ ಶ್ರೀ ಮುಂಧ್ರಾ ಕೂಡಾ ಇದ್ದರೆಂದು ತಿಳಿಯಲಾಗಿದೆ. ಇವರಿಗೆ ರೂ. 100 ಲಕ್ಷ ಸಿಗುವುದೆಂದು ಹೇಳಲಾಗಿದೆ. ಶಹಭಾಷ್ ಟಿ. ಟಿ. ಕೆ.!

ಅಧ್ಯಕ್ಷ ಹೋ-ಚಿ-ಮಿನ್ಹ್

(೩ನೇ ಪುಟದಿಂದ)

ಹೋ-ಚಿ-ಮಿನ್ಹ್‌ರವರು ವಿಯೆತ್‌ನಾಮಿನ ಪ್ರಜಾ ಪ್ರಭುತ್ವವಾದೀ ಪ್ರಜಾತಂತ್ರದ ಸರಕಾರೀ ಪ್ರತಿನಿಧಿ ಮಂಡಲವೊಂದನ್ನು ಅಧಿಕೃತ ಭೇಟಿಗಾಗಿ ಚೀಣದ ಜನತೆಯ ಪ್ರಜಾತಂತ್ರಕ್ಕೂ, ಸೋವಿಯತ್ ಒಕ್ಕೂಟಕ್ಕೂ ಮತ್ತು ಮಂಗೋಲಿಯದ ಪ್ರಜಾತಂತ್ರಕ್ಕೂ ತಮ್ಮ ನೇತೃತ್ವದಲ್ಲಿಯೇ ಕರೆದೊಯ್ದರು. ವಿಯೆತ್‌ನಾಮಿನ ಪ್ರಜಾಪ್ರಭುತ್ವವಾದೀ ಪ್ರಜಾತಂತ್ರದ ಸರಕಾರವೂ ಮತ್ತು ಸೋವಿಯತ್ ಒಕ್ಕೂಟದ ಸರಕಾರವೂ, ವಿಯೆತ್‌ನಾಮಿಗೆ ಭೌತಿಕ ಮತ್ತು ಔದ್ಯೋಗಿಕ ಯಂತ್ರ ತಂತ್ರೀಯ ಸಹಾಯವನ್ನು ನೀಡುವುದರ ಬಗ್ಗೆ ಅನೇಕ ಆರ್ಥಿಕ ಒಡಂಬಡಿಕೆಗಳನ್ನು ಮಾಡಿಕೊಂಡಿವೆ.

1955ರ ಸೆಪ್ಟೆಂಬರ್ ತಿಂಗಳಲ್ಲಿ ಅಧ್ಯಕ್ಷ ಹೋ-ಚಿ-ಮಿನ್ಹ್‌ರವರು ವಿಯೆತ್‌ನಾಮ್ ಪಿತೃಭೂಮಿ ಸಂಯುಕ್ತರಂಗದ" ಗೌರವಾಧ್ಯಕ್ಷರಾಗಿ ಆಯ್ಕೆಗೊಂಡರು. ಪಿತೃಭೂಮಿ ಸಂಯುಕ್ತರಂಗವು ಅತ್ಯಂತ ವಿಸ್ತೃತ ತಳಹದಿಯ ರಾಷ್ಟ್ರೀಯ ಸಂಯುಕ್ತರಂಗವಾಗಿದೆ.

ವಿಯೆತ್‌ನಾಮ್ ಲಾವೋ-ದೋಂಗ್ ಪಾರ್ಟಿಯ ಕೇಂದ್ರೀಯ ಕಾರ್ಯ ನಿರ್ವಾಹಕ ಸಮಿತಿಯ ವಿಸ್ತರಿತ, ಹತ್ತನೆಯ ಅಧಿವೇಶನವು (ಸೆಪ್ಟೆಂಬರ್, 1956) ಹೋ-ಚಿ-ಮಿನ್ಹ್‌ರವರನ್ನು ಪಾರ್ಟಿಯ ಕೇಂದ್ರೀಯ ಕಾರ್ಯ ನಿರ್ವಾಹಕ ಸಮಿತಿಯ ಮಹಾ ಕಾರ್ಯದರ್ಶಿಯವರಾಗಿಯೂ ಮತ್ತು ಪಾರ್ಟಿಯ ಅಧ್ಯಕ್ಷರಾಗಿ ಕೂಡ, ಏಕ ಕಾಲದಲ್ಲಿಯೇ ಚುನಾಯಿಸಿತು.

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: **ಪಂಡಿತ್.**

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೪

(ಪಾರ್ವತಿಯಮ್ಮನ ಮನೆ. ಬಡತನದ ಬಿಡಾರದಂತಿದೆ. ಸಂಜೆಯ ಹೊತ್ತು. ಜಗಲಿಯಲ್ಲಿ ಶಾರದೆ—ಪಾರ್ವತಮ್ಮನ ಮಗಳು—ಬಗ್ಗಿ ಕುಳಿತುಕೊಂಡು ಗರಿಯ ಚಾಪೆ ಹೊಸೆಯುತಿದ್ದಾಳೆ. ಶಾರದೆ ಚೆಲುವೆ. ವಯಸ್ಸು ಹದಿನೈದು—ಹದಿನಾರು ವರ್ಷ. ಮಾಸಿದ ಸೀರೆ—ರವಕೆ ತೊಟ್ಟಿದ್ದಾಳೆ. ಎಷ್ಟೋ ದಿನಗಳಿಂದ ಎಣ್ಣೆ ಕಾಣದ ತಲೆಗೂದಲು ಕೆದರಿಕೊಂಡಿದೆ. ಮುಖದಲ್ಲಿ ಮ್ಲಾನತೆ ತೋರುತ್ತಿದೆ.

ಪಾರ್ವತಮ್ಮ ಅವಳ ಹತ್ತಿರದಲ್ಲಿ ಗೋಡೆಗೆ ಒರಗಿ ಕುಳಿತಿದ್ದಾಳೆ. ಶೂನ್ಯ ದೃಷ್ಟಿಯಿಂದ ದೂರಕ್ಕೆ ನೋಡುತ್ತಿದ್ದಾಳೆ).

ಪಾರ್ವತಮ್ಮ: ಹೂಂ! (ನಿಟ್ಟುಸಿರು ಬಿಡುತ್ತಾಳೆ)

ಶಾರದೆ: ಏನಮ್ಮಾ ಅದು?

ಪಾರ್ವತಮ್ಮ: (ಸ್ವಪ್ನದಿಂದ ಎಚ್ಚರವಾದವಳಂತೆ) ಏನೂ—ಇಲ್ಲ—ಶಾರಿ! (ಸ್ವಲ್ಪ ತಡೆದು) ಆ ಹುಡ್ಗ ಇನ್ನೂ ಬರ್ಲಿಲ್ವಲ್ಲಾ?

ಶಾರದೆ: ಸೆಟ್ರ್ರ ಅಂಗಡಿಯಲ್ಲಿ ತೆಂಗಿನ್‌ಕಾಯಿ ತಗೊಳ್ಳಿಲ್ವೋ—ಏನೋ? ಬೇರೆ ಕಡೆ ಹೋಗಿ ತಡವಾಯ್ತೂಂತ ಕಾಣಿಸ್ತದೆ.

(ಇಬ್ಬರೂ ಮೌನ ತಾಳುತ್ತಾರೆ. ಶಾರದೆ ತನ್ನ ಕೆಲಸದಲ್ಲಿ ಮಗ್ನಳಾಗುತ್ತಾಳೆ. ಸ್ವಲ್ಪ ಹೊತ್ತಾದ ನಂತರ)

ಶಾರದೆ: ಅಲ್ಲಮ್ಮಾ! ರಾಮಣ್ಣಂಗೂ ರಾಜಣ್ಣಂಗೂ ಅಷ್ಟೊಂದು ವಿರೋಧ ಯಾಕಾಯ್ತು?

ಪಾರ್ವತಮ್ಮ: ನಮ್ಮನೇ ಭಾಗ್ಯ ತೀರಿದ್ದಕ್ಕೆ!

ಶಾರದೆ: ಗೋಪ್ಯತ್ತಿಗೇನ ರಾಜಣ್ಣಂಗೆ ಕೊಡೋದೂಂತ ಅವ್ರ ಮನೆಯವರು ನಿಜ ಮಾಡ್ಕೊಂಡಿದ್ರೂಂತ ಹೇಳ್ತಾರೆ. ನಿಜಾನಮ್ಮ?

ಪಾರ್ವತಮ್ಮ: ಅದೇನೋ. ಮೊದ್ಲು ಹೇಳಿಕೊಳ್ತಿದ್ರು. ಆದ್ರೆ— ಪೋಲಿಯಾಗಿ ಹಾರಾಡ್ತಿರೋನಿಗೆ ಯಾರಾದ್ರೂ ಹುಡ್ಗೀನ ಹೆಂಗೆ ಕೊಟ್ಟಾರು? ಗೋಪಿ--ಒಳ್ಳೆ ಹುಡ್ಗೀ-ಕಲ್ತಿದಾಳೆ. ಅವಳ ಕೈಹಿಡಿಯೋ ಭಾಗ್ಯ ರಾಜುಗಿಲ್ದೆ ಹೋಯ್ತು! (ನಿಟ್ಟುಸಿರು ಬಿಡ್ತಾಳೆ)

ಶಾರದೆ: ಹಂಗಾದ್ಮೇಲೆ ರಾಮಣ್ಣ ಮಾಡ್ಕೋಬಾರ್ದಾಗಿತ್ತು.

ಪಾರ್ವತಮ್ಮ: ಹಾಗನ್ಬಾರ್ದು, ಶಾರೀ! ಅವ್ರಿಬ್ರೂ ಸುಖವಾಗಿದಾರೆ. ಹಂಗೇನೇ ಮುಂದಕ್ಕೂ ದೇವ್ರು ಅವರನ್ನ ನಡಸ್ಲಿ!

ಶಾರದೆ: ಗೋಪ್ಯತ್ತಿಗೇನೂ ರಾಜಣ್ಣನ್ನೇ ಆಗ್ಬೇಕೊಂತಿದ್ರಂತೆ?

ಪಾರ್ವತಮ್ಮ: (ಅಸಮಾಧಾನದಿಂದ) ಗೋಪೀ ಹಣೇ ಬರಹ ಚಲೋದಿದ್ದಕ್ಕೆ ರಾಜೂ ಸಂಬಂಧ ತಪ್ಪೋಯ್ತು. ಅದೆಲ್ಲ ಕಟ್ಕೊಂಡು ಈಗೇನ್ಮಾಡ್ತೀಯಾ? ನಿನ್ ಕೆಲ್ಸಾ ಬೇಗ ಮುಗ್ಸು, ಕತ್ಲಾಗ್ತಾ ಬಂತು.

(ಶಾರದೆ, ತಾಯಿಯ ಮನೋಭಾವ ತಿಳಿದು, ಸುಮ್ಮನಾಗುತ್ತಾಳೆ. ತನ್ನ ಕೆಲಸ ಮುಂದುವರಿಸುತ್ತಾಳೆ).

ಪಾರ್ವತಮ್ಮ: (ಸ್ವಲ್ಪ ತಡೆದು) ರಾಜು ಹಿಂಗಾಗಿ ಬಿಟ್‌ನಲ್ಲಾ! (ನಿಟ್ಟುಸಿರು ಬಿಡುತ್ತಾಳೆ). ಅವನಪ್ಪ ಚಿನ್ನದಂಥಾ ಮನುಷ್ಯ (ಕಣ್ಣುಗಳಲ್ಲಿ ನೀರು ತುಂಬುತ್ತದೆ). ಅವರು ತೀರಿಕೊಂಡಾಗ ಇವನಿಗೆ ಹತ್ತು ವರ್ಷ. ಆಗಲೇ ಸ್ವಲ್ಪ ಹಠಮಾರೀಂತಲ್ದೇನೆ ಕೆಟ್ಟ ಚಾಳಿಯೇನೂ ಇದ್ದಿಲ್ಲ. ಇವನ ಕಂಡ್ರೆ ಎಲ್ರಿಗೂ ಪ್ರೀತಿ — ಹುಷಾರಾಗ್ತೀನೆಂತ ಅನ್ತಿದ್ರು. ಅದೇನಾಗಿಬಿಡ್ತೋ, ದೇವ್ರೀಗೇ ಗೊತ್ತು! ಒಡನಾಟ ಚೆನ್ನಾಗಿರ್ಲಿಲ್ಲಾಂತ ಕಾಣ್ತದೆ. ಇವನ ಹಣೆಯಲ್ಲಿ ಬರ್ದದ್ದೇ ಹಂಗೋ ಏನೋ? ಒಟ್ನು ನಂಗೆ ಭಾಗ್ಯ ಇಲ್ಲಾನ್ನು! (ಕಣ್ಣು ಒರಸಿಕೊಳ್ಳುತ್ತಾಳೆ).

ಶಾರದೆ: ರಾಮಣ್ಣ ಅವನ ಪಾಡಿಗೆ ಹೊಂಟೋದ. ರಾಜಣ್ಣಂಗೆ ಗೊಡವೇನೇ ಇಲ್ಲ. ನಮ್ಗೆ ಇಬ್ರೂ ಒಂದೆ—ಇದ್ದೂ ಇಲ್ದಂಗೆ! (ಅವಳೂ ಕಣ್ಣು ಒರಸಿಕೊಳ್ತಾಳೆ).

ಪಾರ್ವತಮ್ಮ: ಹಂಗನ್ಬಾರ್ದಮ್ಮಾ! ನನ್ ಮಕ್ಳು ಎಂಗಾದ್ರೂ ಇದ್ಕೊಂಡೋಗ್ಲಿ - ಅವ್ರ ಮೊಕಾ ನೋಡ್ಕೊಂಡಿದ್ರೇನೇ ಸಾಕ್ ನಂಗೆ! (ಯಾರೋ ಬಂದರೆಂದು ಗ್ರಹಿಸಿ) ಯಾರದೊ?

ಸೋಮಪ್ಪ: (ತೆರೆಯ ಮರೆಯಿಂದ) ನಾನವ್ವ - ಸೋಂಪ.

ಪಾರ್ವತಮ್ಮ: ಬಂದ್ಯಾ? ಯಾಕಪ್ಪಾ ತಡಾ ಆಯ್ತೂ?

ಸೋಮಪ್ಪ: (ಪ್ರವೇಶಿಸುತ್ತಾನೆ) ಸೆಟ್ರ್ರು ಸಾಮಾನ್ ತೂಕಾ ಮಾಡಿ, ಪೊಟ್ನಾ ಕಟ್ಟಿ ಕೊಡೋ ಹೊತ್ತಿಗೆ ಇಷ್ಟೊತ್ತಾಯ್ತು ನೋಡ್ರವ್ವ! ದೊಡ್—ದೊಡ್ಡ ಗಿರಾಕಿಗಳ್ನ ಕಳ್ಸದೆ ನನ್ ಕಡೆ ನೋಡ್ತಾರೆಯೇ ಸೆಟ್ರ್ರು? [ಕೈಯಲ್ಲಿದ್ದ ಒಂದು ಚೀಲವನ್ನು ಜಗುಲಿಯ ಮೇಲಿಟ್ಟು ಅಂಗಳದಲ್ಲಿ ನಿಂತುಕೊಳ್ತಾನೆ].

ಪಾರ್ವತಮ್ಮ: ಅಕ್ಕಿ ಎಷ್ಟು ತಂದ್ಯಪ್ಪಾ?

ಸೋಮಪ್ಪ: ಒಂದೂವರೆ ಸೇರಿದೆವ್ವ—ಒಂದ್ರೂಪಾಯ್ದು!

ಶಾರದೆ: ರೂಪಾಯಿಗೆ ಒಂದೂವರೆ ಸೇರೇನೇ!

ಸೋಮಪ್ಪ: ಹೌದ್ರವ್ವ! ನಾಲ್ಕ್‌ದಿನಾ ಹೋದ್ರೆ, ಅಚ್ಚೇರೇ ಆಗುತ್ತೋ ಏನೊ!

ಪಾರ್ವತಮ್ಮ: (ಚೀಲಕ್ಕೆ ಕೈಹಾಕಿ, ಅದರೊಳಗಿಂದ ಎರಡು-ಮೂರು ಚಿಕ್ಕ ಪೊಟ್ಟಣಗಳನ್ನು ತೆಗೆದು ಕೆಳಗೆ ಇರಿಸುತ್ತಾಳೆ. ಸ್ವಲ್ಪ ಅಕ್ಕಿ ತೆಗೆದು ಕೈಯಲ್ಲಿ ತಿಕ್ಕಿ ನೋಡಿ) ಫರ್ವಾಗಿಲ್ಲ. ಒಲೇ ಮೇಲೆ ನೀರು ಕುದೀತಾ ಇದೆ. ಒಂದಿಷ್ಟು ಅಕ್ಕಿ ತೊಳ್ದು ಹಾಕ್ಬಿಟ್ಟು ಬರ್ತೀನಿ.

ಶಾರದೆ: ನೀನಿಲ್ಲೆ ಇರಮ್ಮ. ಅದ್ ನಾನ್ ಮಾಡ್ತೀನಿ. (ಏಳುತ್ತಾಳೆ)

ಪಾರ್ವತಮ್ಮ: ಬೇಡ. ನೀನು ಆ ಚಾಪೇನ ಈವತ್ತಾದ್ರೂ ಮುಗ್ಸಿಬಿಡು.

(ಶಾರದೆ ತಿರುಗಿ ಕುಳಿತು ಚಾಪೆ ಹೊಸೆಯಲು ಆರಂಭ ಮಾಡುತ್ತಾಳೆ. ಪಾರ್ವತಮ್ಮ ಒಳಗೆ ಹೋಗುತ್ತಾಳೆ)

ಪಾರ್ವತಮ್ಮ: (ಹೋಗುತ್ತಿದ್ದವಳು ತಡೆದು) ಸೋಂಪ ಹಂಗೇನೇ ಹೋಗಿ ಬಿಡ್ಬೇಡ ಕಣೋ! ಗಂಜಿ ಈಗ ಆಗೋಗ್ತದೆ. ಸ್ವಲ್ಪ ಊಟ ಮಾಡ್ಕೊಂಡು ಹೋಗು!

ಸೋಮಪ್ಪ: ನಂಗೆ ತಡಾಗ್ತದಪ್ಪ! ನಾನು ಹೋಗ್‌ಬಿಡ್ತೀನಿ!

ಪಾರ್ವತಮ್ಮ: ಅದೆಂಗಾಗ್ತದೋ? ಕೆಲ್ಸ ಮುಗ್ದಂಗೆ ಇಲ್ಲಿಗೆ ಬಂದೆ—ತೆಂಗಿನ್‌ಕಾಯೀನೂ ಕೊಯ್ದು ಅಂಗ್ಡೀ ಕಡೆ ಹೋದೆ—ಸಾಮಾನ್ ತಗೊಂಬಂದೆದಿನಾ ಏನಾದ್ರೊಂದು ಬಿಟ್ಟಿ ನಿನ್ ಕೈಯಿಂದ ಮಾಡಿಸ್ತಾ ಇರ್ತೀನಿ. ಇದ್ದಾಂಗ ರವಷ್ಟು ಗಂಜೀನಾದ್ರೂ ನಾನ್ ಕೊಡ್‌ಬೇಡ್ವೆ?

ಸೋಂಪ: ಏನೂ ಬೇಕಾಗಿಲ್ಲ ತಾಯಿ! ನಮ್ಮಮ್ಮ ಗಂಜಿಮಾಡಿ ಇಟ್ಟಿರ್ತಾಳೆ. ಕೆಲ್ಸ ಮುಗ್ಸಿ ಮುಗ್ಸಿ ಮೈಕೂಡ ತೊಳ್ಕೊಂಡಿಲ್ಲ—ನಾನ್ ಹೋಗ್ಬಿಡ್ತೀನಿ. ಮತ್ತೆ ಅಪ್ಪನ್ನ ಕಳಿಸ್ತೀನಿ, ಬೇಕಾದ್ರೆ.

ಪಾರ್ವತಮ್ಮ: ಬೇಕಾದ್ರಂತೀಯಲ್ಲ? ರಾಜು ರಾತ್ರಿ ಬರ್ತಾನೋ ಇಲ್ವೋ ಯಾರಿಗ್ ಗೊತ್ತು? ನಾವಿಬ್ರೇ ಹೆಣ್-ಹೆಂಗ್‌ಸ್ರು ಇರೋದಿಕ್ಕಾಗುತ್ಯೇ ಹೇಳು!

ಸೋಮಪ್ಪ: ಹಂಗಾದ್ರೆ ನಾನ್ ಹೋಗಿ ಅಪ್ಪನ್ನ ಬೇಗ ಕಳಿಸ್ತೀನಿ.

ಪಾರ್ವತಮ್ಮ: ಇನ್ನೂ ಹೊತ್ತೈತಿ. ಈ ಅಕ್ಕಿ ಬೇಯೋದು ಎಷ್ಟ್ ಹೊತ್ತು? ಗಂಜಿ ಉಂಡೇ ಹೋಗ್‌ಬಹುದು. (ಒಳಗೆ ಹೋಗುತ್ತಾಳೆ)

(ಸೋಮಪ್ಪ ಜಗಲಿಯ ಒಂದು ಪಕ್ಕದಲ್ಲಿ ಕುಳಿತುಕೊಂಡು, ಒಂದು ಬೀಡಿ ತೆಗೆದು ಹತ್ತಿಸುತ್ತಾನೆ)

ಶಾರದೆ: (ಬಗ್ಗಿ ಕುಳಿತುಕೊಂಡು ಚಾಪೆ ನೇಯುತ್ತಿದ್ದಂತೆಯೆ, ತಲೆ ಎತ್ತದೆ) ಮೇಳಕ್ಕೆ ತಡಾಯ್ತೂಂತ ಅವಸರ ಮಾಡ್ತಿದೀಯಾ—ನಂಗೊತ್ತಿದೆ! ಹಾಡೋದಿಕ್ಕೆ ಅವಸರ ಆದ್ರೆ ಇಲ್ಲೇ ಕುಂತು ಹಾಡ್ಬಹುದು—ಗಂಜೀ ಆಗೋ ತನ್ಕ.

ಸೋಮಪ್ಪ: (ಹಂಗಿಸುವಂತೆ) ಹೌದೌದು—ಹಾಡಂತೆ—ಹಾಡು! ಬೆಳಿಗ್ಗಿಂದ ಸಂಜೀ ತನ್ಕ ಕಲ್ಲ್ ಹೊರ್ಬೇಕು—ಸಂಕಕ್ಕೆ. ಸಂಜೆ ಮುಂದೆ ತೆಂಗಿನ್‌ಕಾಯಿ ಕೊಯಿಬೇಕು—ಅಂಗ್ಡೀಗೆ ಹೋಗ್ಬೇಕು—ಸಾಮಾನ್ ತರ್‌ಬೇಕು—ಚಾಕ್ರಿ ಮಾಡಿ ಸುಸ್ತಾಗ್‌ಬೇಕು. ಮತ್ತೆ ಹಾಡ್ಬೇಕು—ಸಣ್ಣಮ್ಮಾವ್ರು ಕೇಳೋದಿಕ್ಕೆ!

ಶಾರದೆ: [ಮೊದಲಿನಂತೆಯೇ] ಕಲ್ಲ್ ಹೊರೋದು ನಮ್‌ಗೋಸ್ಕರಾನೆ?

ಸೋಮಪ್ಪ: [ಹಂಗಿಸುವಂತೆಯೆ] ಅಲ್ಲ ಮತ್ತೆ! ಕಂಟ್ರ್ರಾಕ್ಟು ನನ್ ಮಾವನೆ?

ಶಾರದೆ: [ಸ್ವಲ್ಪ ಸಿಡುಕಿನಿಂದ] ಹೊ! ಕೈತುಂಬ ಕೂಲಿ ಕೊಡೋದ್ಯಾಕೆ ಮತ್ತೆ?

ಸೋಮಪ್ಪ: ಕೂಲಿ ಕೊಡ್ತಾರಂತೆ-ಕೂಲಿ! ನಿಮ್ಮಣ್ಣ ಕೊಡೋ ಕೂಲಿ ಒಂದ್ ಹೊತ್ತಿನ ಕೂಳಿಗೂ ಸಾಲ್ದು. ಅದೂ ಸರಿಯಾಗಿ ಕೊಡಂಗಿಲ್ಲ. ಲೆಕ್ಕ ಆಗಿಲ್ಲಾ—ಬಿಲ್ಲು ವಟಾಯಿಸಿಲ್ಲಾಂತೆಲ್ಲ ದಬಾಯಿಸಿ ಸಾಯಿಸ್ತಾರೆ.

ಶಾರದೆ: [ಸಿಡುಕಿನಿಂದ] ಹಂಗಾದ್ರೆ ಬಿಟ್ ಬಿಡು—ಕೆಲ್ಸಕ್ಕೂ ಹೋಗ್‌ಬೇಡ-ಚಾಕ್ರಿಗೂ ಬರ್ಬೇಡ!

ಸೋಮಪ್ಪ: [ಮನಸ್ಸಿಗೆ ನಾಟುವಂತೆ] ಚಾಕ್ರಿಗೆ ಬರ್ಬೇಡಾಂತಾರೆ! ಮತ್ತೇನ್ಮಾಡ್ ತೀರಿ? ನಿಮ್ಮ ಅಣ್ಣಂದ್ರು—ಒಬ್ರು ಹಣಾ ಕೂಡ್ಸೋದ್ರಲಿದಾರೆ—ಒಬ್ರು ಕಳಿಯೋದ್ರಲಿದಾರೆ! ತಾಯಿ ಮೊಕಾ ನೋಡೋರು ಒಬ್ರೂ ಇಲ್ಲ! ದೊಡ್ಡಮ್ಮಾವ್ರು ಇದಾರಲ್ಲಾಂತ ನಾವು ಕರ್ದಾಗ ಬಂದು ಏನಾದ್ರೂ ಮಾಡ್ತಿರೋದು. ಯಾರಾದ್ರೂ ಗಂಟ್ ಕೊಡ್ತಾರೇಂತಲ್ಲ!

[ಅಪಮಾನವಾದವಳಂತೆ ಶಾರದೆ ಮೌನವಾಗಿ ಬಿರುಸಿನಿಂದ ಚಾಪೆ ಹೊಸೆಯುತ್ತಾಳೆ. ಸ್ವಲ್ಪ ಹೊತ್ತು ಮೌನ. ಸೋಮಪ್ಪ ಮತ್ತೊಂದು ಬೀಡಿ ಹತ್ತಿಸುತ್ತಾನೆ. ತಾನು ಹೇಳಿದ ಮಾತು ಸ್ವಲ್ಪ ಕಠಿಣವಾಗಿ ಬಿಟ್ಟಿತೆಂದು ತಿಳಿದು ಅವನಿಗೆ ವ್ಯಸನವಾಗುತ್ತದೆ. ಒಂದೆರಡು ಸಲ ಶಾರದೆಯ ಕಡೆಗೆ ನೋಡುತ್ತಾನೆ. ಅವಳು ಯಾವುದನ್ನು ಗಮನಿಸದೆ ತನ್ನ ಕೆಲಸದಲ್ಲೇ ಮಗ್ನಳಾಗಿದ್ದಾಳೆ.]

ಸೋಮಪ್ಪ: (ಸಮಾಧಾನ ಪಡಿಸುವ ಧಾಟಿಯಲ್ಲಿ) ಚಾಪೆ ಆಯ್ತೆ?

[ಶಾರದೆ ಮಾತನಾಡುವುದಿಲ್ಲ[

ಸೋಮಪ್ಪ: ಚಾಪೆಗೆ ಎಷ್ಟ್ ರೊಕ್ಕ ಬಂತು?

(ಶಾರದೆ ಮತ್ತೂ ಮಾತಾಡುವುದಿಲ್ಲ)

ಸೋಮಪ್ಪ: ಹನ್ನೆರಡಾಣೆ ಬಂತೆ?

[ಶಾರದೆ ಮೌನವಾಗಿದ್ದಾಳೆ[

ಸೋಮಪ್ಪ: [ಎದ್ದು ಮೆಲ್ಲಗೆ ನಡೆಯುತ್ತ, ಅವನಷ್ಟಕ್ಕೆ ಹೇಳುತ್ತಾನೆ] ನಾನು ಹೋಗ್ತೀನಿ.

ಶಾರದೆ: (ಪಕ್ಕನೆ ಗಟ್ಟಿಯಾಗಿ) ಅಮ್ಮಾ! ಸೋಂಪ ಹೋಗ್ತಾನಂತೇ!

ಪಾರ್ವತಮ್ಮ: [ಒಳಗಿಂದ] ಸೋಂಪಾ! ಒಂದ್ ನಿಮಿಷ—ಗಂಜಿ ಆಗೋಯ್ತು!

[ಸೋಮಪ್ಪ ತಿರುಗಿ ನಿಲ್ಲುತ್ತಾನೆ]

ಶಾರದೆ: [ಮೊದಲಿನಂತೆಯೇ ಗಟ್ಟಿಯಾಗಿ] ಅವನಿಗೆ ತಡ ಆಯ್ತಂತಮ್ಮಾ! ಇರೋದಿಕ್ಕಾಗೋಲ್ಲಾಂತೇ!

ಪಾರ್ವತಮ್ಮ: [ಒಳಗಿಂದ] ನಿಲ್ಲೋ ತಮ್ಮ!

ಸೋಮಪ್ಪ: ಹಂಗೇ ಆಗ್ಲಿ ಅವ್ವಾ! ನಾನ್ ಹೋಗೋದಿಲ್ಲಾ! [ತಿರುಗಿ ಬಂದು ಮೊದಲು ಕುಳಿತಿದ್ದಲ್ಲೆ ಕುಳಿತುಕೊಳ್ಳುತ್ತಾನೆ. ಶಾರದೆಗೆ ಪಕ್ಕನೆ ನಗುಬಂತು. ಅವಳು ನಗು ಅಡಗಿಸಿಕೊಂಡು ಚಾಪೆ ಹೊಸೆಯುತ್ತಾಳೆ.]

ಸೋಮಪ್ಪ: [ಶಾರದೆಯ ಕಡೆಗೆ ನೋಡಿ] ತಮಾಷೆ ಮಾಡ್ತೀರಾ? ಚಿಕ್ಕಣ್ಣಂಗೆ ಹೇಳ್ತೀನಿ!

[ಶಾರದೆ ಬಗ್ಗಿ ಕುಳಿತಿದ್ದಂತೆಯೆ ನಸುನಗುತ್ತಾಳೆ. ಅಷ್ಟರಲ್ಲಿ ರಾಜು ಬರುತ್ತಾನೆ. ಮೊದಲನೆಯ ದೃಶ್ಯದಲ್ಲಿ ಧರಿಸಿದ್ದ ತರದ್ದೇ ಬಟ್ಟೇಬರೆ ತೊಟ್ಟಿದ್ದಾನೆ. ಮಡಿಸಿದ ಚೂರಿಯೊಂದು ಎಡಗೈಯ್ಯಲ್ಲಿದೆ.)

ರಾಜು: (ಸೋಮಪ್ಪನನ್ನು ನೋಡಿ) ಯಾರೊ ಅದು?

ಸೋಮಪ್ಪ: (ಉಪಚಾರಕ್ಕೆ ಎದ್ದು ಒಂದು ಪಕ್ಕದಲ್ಲಿ ನಿಲ್ಲುತ್ತಾನೆ) ನಾನು!

(ಪಾರ್ವತಮ್ಮ ಮಗನ ಸ್ವರ ಕೇಳಿ ಹೊರಗೆ ಬರುತ್ತಾಳೆ. ರಾಜುವನ್ನು ನೋಡಿ ನಿಲ್ಲುತ್ತಾಳೆ, ಶಾರದೆ ಚಾಪೆ ಹೊಸೆಯುವುದನ್ನು ಬಿಟ್ಟು ಏಳುತ್ತಾಳೆ.)

ರಾಜು: (ಸೋಮಪ್ಪನನ್ನು ನೋಡಿ) ಹೂಂ — ಏನು?

ಸೋಮಪ್ಪ: ಏನಿಲ್ಲ! ಅಂಗ್ಡಿಯಿಂದ ಸಾಮಾನ್ ತಗೊಂಬಂದೆ.

ರಾಜು: (ಶಾರದೆಯನ್ನೂ ಆಕೆ ಹೊಸೆಯುತ್ತಿದ್ದ ಚಾಪೆಯನ್ನು ನೋಡಿ) ಇದೇನೆ ಇದು? ಚಾಪೆ ಹೊಸೆಯೋದೂ — ಬುಟ್ಟಿ ಹೆಣೆಯೋದೂ—ಇಲ್ಲಿಗೆ ಬಂತೇನೆ? (ಕೋಪದಿಂದ) ತಗೊಂಡು ನಡೀ ಒಳಗೆ! ಹೂಂ — ನಡೀತೀಯೋ ಇಲ್ವೊ?

(ಶಾರದೆ ಅರ್ಧ ಹೊಸೆದಿದ್ದ ಚಾಪೆಯನ್ನು ತಗೆದುಕೊಂಡು ಮೆಲ್ಲಗೆ ಒಳಗೆಹೋಗುತ್ತಾಳೆ. ಪಾರ್ವತಮ್ಮ ವ್ಯಸನದಿಂದ ರಾಜುವಿನ ಒಂದೊಂದು ಮಾತನ್ನು ಕೇಳುತ್ತ ಅವನನ್ನೇ ನೋಡಿ ನಿಂತಿದ್ದಾಳೆ.)

ರಾಜು: ಜಗುಲಿಯ ಒಂದು ಪಕ್ಕದಲ್ಲಿದ್ದ ಬೆಂಚಿನಲ್ಲಿ ಕುಳಿತು, ಒಂದು ಬೀಡಿ ತೆಗೆದು ಹತ್ತಿಸುತ್ತಾನೆ. ಬೀಡಿ ಸೇದುತ್ತ ಪಾರ್ವತಮ್ಮನ ಕಡೆಗೆ ನೋಡಿ) ಹಸಿವಾಗ್ತದಲ್ಲಾ!

ಪಾರ್ವತಮ್ಮ: ಸ್ವಲ್ಪ ತಡ್‌ಕೊ! ಗಂಜಿ ಆಗ್ಲಿ.

ರಾಜು: ಇನ್ನೂ ಆಗಿಲ್ವೆ? ಹಗ್ಲೆಲ್ಲಾ ಏನ್ಮಾಡ್ತಿದ್ರಿ ಮತ್ತೆ?

ಪಾರ್ವತಮ್ಮ (ವ್ಯಸನವೂ ಕೋಪವು ಬೆರೆತ ರೀತಿಯಲ್ಲಿ) ಹಗ್ಲೆಲ್ಲಾ ಉಗ್ರಾಣದ ಕೀಲಿ ಸಿಗ್ಲಿಲ್ಲ—ಅಕ್ಕಿ ತೆಗೆಯೋದಕ್ಕೆ!

ರಾಜು: ಓಹೋ! ಕತ್ಲಾಗೋ ಹೊತ್ತಿಗೆ ಅದೆಲ್ಲಿಂದ ಬಂತು ಮತ್ತೆ?

ಪಾರ್ವತಮ್ಮ: (ಒಂದು ನಿಮಿಷ ಅವನನ್ನೆ ದಿಟ್ಟಿಸಿ ನೋಡಿ, ಸಹಿಸಲಾರದ ದುಃಖದಿಂದ) ನನ್ನನ್ನೂ ಶಾರದೇನ್ನೂ ಕೊಂದುಬಿಡ್‌ಬಾರ್ದೇ ರಾಜೂ —

ರಾಜು: (ತೀರಾ ತಮಾಷೆಯ ಮಟ್ಟನಲ್ಲಿ) ತಡಿಯಮ್ಮ — ತಡಿ! ಅದೀಗ್ಲೇ ಆಗ್ಬೇಕೆ? ಏನಾದ್ರೂ ಒಂದಿಷ್ಟು ತಿಂದಾದ್ಮೇಲೆ ಸಾಲ್ದೆ?

ಪಾರ್ವತಮ್ಮ: (ಸಿಡುಕಿನಿಂದ) ನೀನ್ ಕುಡ್ದೇನೊ ಬಂದಿರೋದು?

ರಾಜು: ಅಲ್ಲ.

ಪಾರ್ವತಮ್ಮ: ನೀನೀಗ ಕುಡ್ದಿಲ್ವೆ?

ರಾಜು: ಕೋಪ ಮಾಡಿದ್ರೆ ಹೇಗಮ್ಮಾ? ಕುಡಿಯೋದಿಕ್ಕೆ ಕೈಯಲ್ಲಿ ಮೂರ್ಕಾಸಾದ್ರೂ ಇರ್ಬೇಡ್ವೇ? ಈಗ ಕುಡ್ದಿಲ್ಲಾಂತ ದೇವರಾಣೆ ಹಾಕ್ತಿನಿ, ಬೇಕಿದ್ರೆ!

(ರಾಜನನ್ನೆ ಗಂಭೀರ ದೃಷ್ಟಿಯಿಂದ ನೋಡುತ್ತ ನಿಂತಿದ್ದ ಸೋಮಪ್ಪ ಒಮ್ಮೆಲೆ ನಕ್ಕುಬಿಡುತ್ತಾನೆ — ಪಾರ್ವತಮ್ಮ ದು:ಖದಿಂದ ಒಳಗೆ ಹೋಗುತ್ತಾಳೆ.)

— ಮುಂದುವರಿಯುವುದು —

ರಾಜ್ಯದ ಸುದ್ದಿ ಸಂಗ್ರಹ

(೭ನೇ ಪುಟದಿಂದ)

ರ ಹಿತವನ್ನು ಅಲಕ್ಷಿಸಿ, ಭೂಮಾಲಿಕ ,ಪರ ಆಳ್ವಿಕೆ ನಡೆಸಿರುವುದೇ ಇಂದಿನ ಗಣರಾಜ್ಯ ದಿನಾಚರಣೆಯಲ್ಲಿ ರೈತರು ಉತ್ಸಾಹ ಹುಮ್ಮಸಿನಿಂದ ಭಾಗವಹಿಸದಂತೆ ಮಾಡಿದೆ. ಏನಿದ್ದರೂ ರೈತರು, ಗಂಡು–ಹೆಣ್ಣು ಮಕ್ಕಳೆನ್ನದೆ ಮುಂದೆ ಬಂದು ತಮ್ಮ ಹಕ್ಕಿಗಾಗಿ ಹೋರಾಡಬೇಕೆಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪೀಣ್ಯ ಗ್ರಾಮದಲ್ಲಿ ಶಾಲಾ ಕಟ್ಟಡಕ್ಕೆ ಸುಮಾರು 3ಸಾವಿರ, ನಿಧಿ ಸಂಗ್ರಹವಾಗಿ ಅದು ಪಟೇಲರ ಹತ್ತಿರವಿದ್ದರೂ, ಶಾಲಾ ಕಟ್ಟಡ ಕಟ್ಟುವ ಸುದ್ದಿಯೇ ಇಲ್ಲವೆಂದು ಗ್ರಾಮದ ಸಮಸ್ಯೆಗಳನ್ನೆತ್ತಿ ಮಾತಾಡಿದರು.

ನೀರಿನ ತೊಂದರೆ

ಬೆಂಗಳೂರು ಉತ್ತರ ತಾಲೂಕು ರೈತ ಸಂಘದ ಉಪಾಧ್ಯಕ್ಷರಾದ ಶ್ರೀ ಶಿವರುದ್ರಪ್ಪನವರು ಮತ್ತು ಪೀಣ್ಯಗ್ರಾಮ ರೈತ ಸಂಘದ ಖಜಾಂಚಿ ಶ್ರೀ ಕದರಪ್ಪನವರೂ ಭಾಷಣ ಮಾಡಿದರು.

ಶಿವರುದ್ರಪ್ಪನವರು ತಮ್ಮ ಭಾಷಣದಲ್ಲಿ ಪೀಣ್ಯ ಗ್ರಾಮದಲ್ಲಿ ನೀರಿನ ವಿಷಯ ಸರಕಾರಕ್ಕೆ ಅರ್ಜಿ ಸಲ್ಲಿಸಿದರೂ ಅದು ವಿಫಲವಾಗಿದೆ. ಚೇಯರ್‌ಮೆನ್ನರೇ ನೀರು ಸಿಗದಂತೆ ತಡೆಯುತ್ತಿದ್ದಾರೆಂದು, ಹೇಳಿ, ಇದನ್ನು ಒಗ್ಗಟ್ಟಿನಿಂದ ರೈತರು ಪ್ರತಿಭಟಿಸಬೇಕು. ಕೊಳಾಯಿಯ ನೀರು ಚೇಯರ್‌ಮೆನ್ನರ ಮನೆಗೆ ಮಾತ್ರ ಬರುವುದಕ್ಕಾಗಿ ಅಲ್ಲ ಎಂದಂದರು.

ಶ್ರೀ ಕದರಪ್ಪನವರು ಗ್ರಾಮದ ಭೂಹೀನರಿಗೆ ಖಾಲಿ ಭೂಮಿ ಹಂಚುವಂತಾಗಬೇಕೆಂದೂ, ರೈತಸಂಘ ಸೇರದ ರೈತರಿಗೆ ಸರ್ಕಾರಿ ಅಧಿಕಾರಿಗಳು ಬೆದರಿಕೆ ಹಾಕಿಸುವುದನ್ನು ನಿಲ್ಲಿಸಬೇಕೆಂದು, ಪಟೇಲ್ ಮತ್ತು ಚೇಯರ್‌ಮೆನ್‌ಗಿರಿಯನ್ನು ಒಬ್ಬನೇ ನೋಡಿಕೊಳ್ಳುವುದು ಇನ್ನು ಮುಂದೆ ನಿಲ್ಲಬೇಕೆಂದು ಹೇಳಿದರು.

ದಂಡೇಲಿ 'ಜನಶಕ್ತಿ' ಏಜೆಂಟರಿಗೆ ಪೋಲೀಸರ ತಗಾದೆ

ಉತ್ತರ ಕರ್ನಾಟಕದ, ದಂಡೇಲಿಯಲ್ಲಿರುವ "ಜನಶಕ್ತಿ" ಏಜೆಂಟರ ಮೇಲೆ ಪೋಲೀಸರ ವಕ್ರದೃಷ್ಟಿ ಬಿದ್ದಿದೆ ಎಂದು ನಮಗೆ ವರದಿಯಾಗಿದೆ. ದಿನಾ ಬಿಡದೆ ಪೋಲೀಸರು ನಮ್ಮ "ಏಜಂಟ"ರನ್ನು ಬೆದರಿಸುತ್ತಿದ್ದಾರೆ. ಕಮ್ಯೂನಿಸ್ಟ್ ಸಾಹಿತ್ಯ ಮಾರುವುದೇ ಕಾನೂನು ವಿರುದ್ಧವೆಂದು ಹೇಳುತ್ತಿದ್ದಾರೆಂದು ತಿಳಿದುಬಂದಿದೆ.

ಈ ಪೋಲೀಸರು ಬಹುಶಃ ಇಂಗ್ಲಿಷರ ಕಾಲದಿಂದೀಚೆಗೆ ಬೆಳಕೇ ಕಂಡಿಲ್ಲವೆಂದು ಕಾಣುತ್ತೆ. ಕಮ್ಯೂನಿಸ್ಟ್ ಪಾರ್ಟಿ ಮತ್ತು ಸಾಹಿತ್ಯ ಕಾನೂನು ಬದ್ಧ ಮಾತ್ರವಲ್ಲ, ನಮ್ಮ ದೇಶದ ಒಂದು ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷ ಆಡಳಿತೆ ನಡೆಸುತ್ತಿದೆ ಎಂಬುದು ಈಉದ್ಧಟ ಪೋಲೀಸ ಖಾತೆಯ 'ಮರದ ತಲೆಗೆ' ಹೊಕ್ಕಿಲ್ಲವೆಂದು ಇದರಿಂದ ತಿಳಿಯಬೇಕಾಗುತ್ತದೆ.

ಪೋಲೀಸರ ಈ ಅನಾಗರಿಕ ಹಾಗೂ ದಬ್ಬಾಳಿಕಾ ನೀತಿಯು ಖಂಡನೀಯವಾದುದು. ಇದು ಪೋಲೀಸು ರಾಜ್ಯವಲ್ಲವೆಂದು ಪೋಲೀಸು ಖಾತೆ ತಿಳಿಯಬೇಕು.

ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರಿಗೆ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ಅಧಿಕಾರಿಗಳು ತಕ್ಷಣವೇ ಇದಕ್ಕೆ ಗಮನವಿತ್ತು ಸಂಬಂಧಪಟ್ಟವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವರೆಂದು ನಂಬಿರುತ್ತೇವೆ. ಅಲ್ಲದೆ ಈ ಪೋಲೀಸರಾದರೂ, ಜನತೆಯೊಡನೆ ನಡೆದುಕೊಳ್ಳುವ ರೀತಿ ನೀತಿಯನ್ನು ಇನ್ನು ಮುಂದಾದರೂ ಕಲಿತುಕೊಳ್ಳುವರೆಂದು ಆಶಿಸುತ್ತೇವೆ.

ಓದುಗರ ಓಲೆ

ಧರ್ಮಾಸ್ಪತ್ರೆಯ ದುಸ್ಥಿತಿ!

ಶುಂಠಿಕೊಪ್ಪದಲ್ಲಿ ಹೆಸರಿಗೊಂದು ಧರ್ಮಾಸ್ಪತ್ರೆಯಿದೆ. ಆದರೆ ರೋಗಿಗಳಿಗ ಇಲ್ಲ. ಧರ್ಮಾರ್ಥ ಮದ್ದು ದೊರಕಿಸುವ ಧರ್ಮವನ್ನು ಇಲ್ಲಿ ಡಾಕ್ಟರರು ಮರೆತಂತಿದೆ. ಇವರ ಪೀಕಲಾಟದಿಂದಾಗಿ, ನಿಷ್ಠೆಯಿಂದ ಕೆಲಸ ಮಾಡುವ ನರ್ಸು, ಕಂಪೌಂಡರುಗಳು ವರ್ಗಾಯಿಸಲ್ಪಡುತ್ತಾರೆ.

ಇಷ್ಟೇ ಅಲ್ಲ, ಜನರಾಡಿಕೊಳ್ಳುವಂತೆ ಗುಟ್ಟಾಗಿ ಸರಕಾರಿ ಮದ್ದನ್ನು ರೋಗಿಗಳಿಗೆ ಧರ್ಮಾರ್ಥ ಉಪಯೋಗಿಸದೆ, ಹೊರಗೆ ಮಾರಲಾಗುವುದೆಂದು ತಿಳಿಯಲಾಗಿದೆ. ಅಸ್ವಸ್ಥ ರೋಗಿಗಳನ್ನು "ನಿನಗೇನು ಧಾಡಿ" ಎಂದು ಕೂಡಲೇ ಹಿಂದಕ್ಕೆ ಕಳಿಸಲಾಗುತ್ತಿದೆ.

ಇನ್ನು ಮುಂದಾದರೂ ಈ ಧರ್ಮಾಸ್ಪತ್ರೆ, ಧರ್ಮದಿಂದ ಕಾರ್ಯ ನಿರ್ವಹಿಸುವಂತಾಗಲು, ಇಲ್ಲಿನ ಡಾಕ್ಟರರು ಯತ್ನಿಸುವರೆ?

"ನೊಂದವ"

ಅಪಘಾತದ ಮೇಲೆ ಆಘಾತ

ಶುಂಠಿಕೊಪ್ಪದ ನಿವಾಸಿಯಾದ ಕೂಲಿಕಾರ ಮುತ್ತು ಎಂಬ ಹುಡುಗನು ತಾ॥ 21-1-58ರಂದು ಸಂಜೆ ಸುಮಾರು 7 ಗಂಟೆ ಸಮಯದಲ್ಲಿ ಲಾರಿಯೊಂದರ ಕೆಳಗೆ ಸಿಕ್ಕಿ ತೀವ್ರ ಅಪಘಾತಕ್ಕೆ ಈಡಾಗಿದ್ದಾನೆ. ಈ ಅಪಘಾತ ನಡೆದುದು ಶುಂಠಿಕೊಪ್ಪದ ಕಮ್ಯೂನಿಸ್ಟ್ ಪಾರ್ಟಿ ಆಫೀಸಿನ ಎದುರುಗಡೆ. ಅಪಘಾತಕ್ಕೊಳಗಾದ ಹುಡುಗನ ಬಗ್ಗೆ ಏನೂ ಕ್ರಮವೆಸಗದೆ ಇಲ್ಲಿನ ಪೋಲೀಸರು ಗಾಯದ ಮೇಲೆ ಬರೆ ಎಳೆಯುವ ಕಾರ್ಯದಲ್ಲಿ ತೊಡಗಿದ್ದಾರೆ.

ಇತ್ತ ಲಾರಿಗೆ ಲೋಡು ಮಾಡಿದ ಸೇಸ ಎಂಬ ವ್ಯಕ್ತಿ ಹುಡುಗ ಸತ್ತರೆ ಚಿಂತಿಲ್ಲವೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾನಂತೆ. ಅದಕ್ಕೆ ಸರಿಯಾಗಿ ಶುಂಠಿಕೊಪ್ಪದ ಪೋಲಿಸ್ ಸಬ್‌ಇನ್‌ಸ್ಪೆಕ್ಟರ್ ಹಣದ ಮುಖ ಕಂಡು ಮಾತನಾಡುತ್ತಿದ್ದಾರೆಂದು ಹೇಳಲು ಬೇಸರವಾಗುತ್ತಿದೆ. ತನ್ನ ಅಧಿಕಾರದ ದುರುಪಯೋಗ ಮಾಡಿಕೊಂಡು, ಅಪಘಾತಕ್ಕೊಳಗಾದ ಕೂಲಿ ಹುಡುಗನನ್ನು ಕರೆಸಿ, ಬಲತ್ಕಾರದಿಂದ ಹೆಬ್ಬೆಟ್ಟಿನ ಮುದ್ರೆ ತೆಗೆದು,ಕೊಂಡಿದ್ದಾರೆ. 'ನಾನು ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ' ಎಂದು ಈ ಹುಡುಗ ಹೇಳಬೇಕೆಂದೂ, ಇದನ್ನೊಳಗೊಂಡ್ಯ ಕಾಗದಕ್ಕೆ ಹೆಬ್ಬೆಟ್ಟನ್ನು ಪಡೆಯಲಾಗಿದೆ. ಊರಲ್ಲಿಲ್ಲದವರ ಸಾಕ್ಷ್ಯಗಳನ್ನು ಒದಗಿಸಲಾಗಿದೆ.

ಪೋಲೀಸು ಖಾತೆ ಇರುವುದು ಬಡವನ ಮೇಲೆ ಬಲತ್ಕಾರ ಮಾಡಲಿಕ್ಕಾಗಿಯೇ! ಲಂಚ ತಿಂದು ಅನ್ಯಾಯವನ್ನು ಮುಚ್ಚಿಡಲಿಕ್ಕಾಗಿಯೇ? ಹಾಗಲ್ಲವಾದರೆ ಈ ಸಬ್‌ಇನ್‌ಸ್ಪೆಕ್ಟರನ ದುರ್ನಡತೆಯ ವಿಚಾರಣೆ ಕೂಡಲೇ ನಡೆಯಬೇಕು.

'ನಾಗರಿಕ'

ಶುಂಠಿಕೊಪ್ಪ

ವಿಮಾನ ಕಾರ್ಖಾನೆ ನೌಕರರ ಮೇಲೆ ದಬ್ಬಾಳಿಕೆ!

ಬೆಂಗಳೂರಿನಲ್ಲಿರುವ ಕೇಂದ್ರ ಸರಕಾರದ ಉದ್ದಿಮೆಯಾದ ಹಿಂದುಸ್ತಾನ್ ವಿಮಾನ ಕಾರ್ಖಾನೆ ನೌಕರರ ಮೇಲೆ ಮ್ಯಾನೇಜ್‌ಮೆಂಟಿನವರ ಮತ್ತು ಸರಕಾರದ ದಬ್ಬಾಳಿಕೆ ಮುಂದುವರಿಯುತ್ತಿದೆ. ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆಯಲು ಸಂಘದವರು ಶಾಂತಿಯುತವಾದ ರೀತಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ ವಿಷಯ ಎಲ್ಲರಿಗೂ ತಿಳಿದಿದೆ. ಈ ಸಂದರ್ಭದಲ್ಲಿ ಸರಕಾರದವರು ನೌಕರರ ಪ್ರತಿನಿಧಿಗಳನ್ನು ಬಂಧಿಸಿ ಅವರ ಮೇಲೆ ಕೇಸುಗಳನ್ನು ಹಾಕಿ, ಸತ್ಯಾಗ್ರಹ ಹೋರಾಟವನ್ನು ದಬ್ಬಾಳಿಕೆಯಿಂದ ತುಳಿದರು. ವಿಮಾನ ಕಾರ್ಖಾನೆ ಮ್ಯಾನೇಜ್‌ಮೆಂಟಿನವರು ನೌಕರರೊಡನೆ ಮಾತುಕತೆ ನಡೆಸಿ ನ್ಯಾಯವಾದ ಒಪ್ಪಂದಕ್ಕೆ ಬರುವುದರ ಬದಲಾಗಿ ಸೇಡು ತೀರಿಸಿಕೊಳ್ಳುವ ಧೋರಣೆ ಅನುಸರಿಸುತ್ತಿದ್ದಾರೆ. ಎಂಭತ್ತಕ್ಕೂ ಹೆಚ್ಚು ನೌಕರರನ್ನು ಕೆಲಸದಿಂದ ಸಸ್ಪೆಂಡ್ ಮಾಡಿ ಎರಡು ತಿಂಗಳಾಗುತ್ತಾ ಬಂದಿದೆ. ಮ್ಯಾನೇಜ್‌ಮೆಂಟ್ ತೋರಿಕೆಗೆ ವಿಚಾರಣೆ ನಡೆಸಿ, ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿ ಈಗಾಗಲೇ ಹದಿನೈದು ಮಂದಿ ನೌಕರರನ್ನು ಕೆಲಸದಿಂದ ವಜಾ ಮಾಡಿದೆ. ಇವರೆಲ್ಲ ಸಂಘದ ಪ್ರಮುಖ ನಾಯಕರುಗಳು.

ಒಂದೆಡೆ ಮ್ಯಾನೇಜ್‌ಮೆಂಟಿನವರ ದಬ್ಬಾಳಿಕೆ ನಡೆಯುತ್ತಿದ್ದರೆ, ಇನ್ನೊಂದೆಡೆ ಸರಕಾರವೂ ದಬ್ಬಾಳಿಕೆ ನಡೆಸುತ್ತಿದೆ. ನೌಕರರ ಪ್ರತಿನಿಧಿಗಳು ತಮ್ಮ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಮತ್ತು ಸರಕಾರವು ಪ್ರವೇಶಿಸಿ ಮ್ಯಾನೇಜ್‌ಮೆಂಟನೊಂದಿಗೆ ಸಂಧಾನವು ಫಲಗೊಳ್ಳುವಂತೆ ಮಾಡಬೇಕೆಂದೂ ಹಲವು ಬಾರಿ ಕೇಳಿಕೊಂಡರೂ ಸಹ ಕಿವಿಗೊಡದೆ ಕುಳಿತಿದೆ. ಕೇಸುಗಳನ್ನು ವಾಪಸು ಪಡೆಯುವುದಾಗಿ ಭರವಸೆ ಇತ್ತಿದ್ದರೂ ಸಹ ಅದು ಭರವಸೆಯಾಗಿಯೇ ಉಳಿದಿದೆ. ನೌಕರರ ಮೇಲೆ ಚಾರ್ಜ್‌ಷೀಟುಗಳು ಹಾಕಲಾಗಿದೆ.

ಈ ಮಧ್ಯೆ ನೌಕರರ ಐಕ್ಯತೆಯನ್ನು ಮುರಿಯುವ ಸಲುವಾಗಿ, ಸಂಘದ ಸಂಘಟಿತ ಶಕ್ತಿಯನ್ನು ಕುಂದಿಸುವ ಸಲುವಾಗಿ ಕೆಲವು ಮ್ಯಾನೇಜ್‌ಮೆಂಟ್ ಏಜಂಟರುಗಳು ಯತ್ನಿಸುತ್ತಿದ್ದಾರೆ ಜಾತೀಯತೆ, ಕಮ್ಯೂನಿಸಂ ಮುಂತಾದ ವಾದಗಳನ್ನು ಮುಂದೂಡಿ ನೌಕರರಲ್ಲಿ ಗೊಂದಲ ಹಬ್ಬಿಸಲು ಯತ್ನಿಸುತ್ತಿದ್ದಾರೆ. ಆದರೆ ಇವರ ಪ್ರಯತ್ನ ವಿಫಲವಾಗುವುದು ಖಂಡಿತ.

ಕಳೆದ ಭಾನುವಾರ ಚಿಕ್ಕಲಾಲ್ ಬಾಗಿನಲ್ಲಿ ನಡೆದ ಭಾರೀ ಬಹಿರಂಗ ಸಭೆಯೇ ಇದಕ್ಕೆ ಸಾಕ್ಷಿಯಾಗಿದೆ. ಸಂಘವು ನಿರ್ಭೀತಿಯಿಂದ ದ್ರೋಹಿಯನ್ನು ಬಯಲಿಗೆಳೆದಿದೆಯಲ್ಲದೆ, ದ್ರೋಹ ಬಗೆದ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರನ್ನೂ ಸಂಘದಿಂದ ಹೊರಹಾಕಿದೆ.

ಸರಕಾರದ ಮತ್ತು ಮ್ಯಾನೇಜ್‌ಮೆಂಟಿನ ದಬ್ಬಾಳಿಕೆಯ ವಿರುದ್ಧವಾಗಿ ವಿಮಾನ ಕಾರ್ಖಾನೆ ನೌಕರರು ತಮ್ಮ ಹೋರಾಟವನ್ನು ಮುಂದುವರಿಸಲು ದೃಢಸಂಕಲ್ಪ ಮಾಡಿದ್ದಾರೆ. ಫೆಬ್ರುವರಿ 2ರಂದು ಭಾನುವಾರ ಕೇಂದ್ರ ಕೈಗಾರಿಕಾ ನೌಕರರ ಫೆಡರೇಷನ್ನಿನ ಆಶ್ರಯದಲ್ಲಿ ಪ್ರತಿಭಟನಾ ಸೂಚಕವಾಗಿ ಭಾರೀ ಬಹಿರಂಗ ಸಭೆ ಚಿಕ್ಕಲಾಲ್ ಬಾಗಿನಲ್ಲಿ ನಡೆಯಿತು. 10 ಸಾವಿರಕ್ಕೂ ಮಿಕ್ಕಿ ನೌಕರರು ಸಭೆಗೆ ಆಗಮಿಸಿದ್ದರು. ವಿಮಾನ ಕಾರ್ಖಾನೆ ನೌಕರರ ದೊಡ್ಡ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಸಭೆಗೆ ಆಗಮಿಸಿತು.

ಸಂಘದ ನಾಯಕರುಗಳಷ್ಟೇ ಅಲ್ಲದೆ ಹಿಂದ್ ಮಜದೂರ್ ಸಭೆ, ಕರ್ನಾಟಕಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಇತರ ಟ್ರೇಡ್ ಯೂನಿಯನ್‌ಗಳ ನಾಯಕರು ನೌಕರರನ್ನುದ್ದೇಶಿಸಿ ಮಾತನಾಡಿ, ಸರಕಾರದ ಮತ್ತು ಮ್ಯಾನೇಜ್‌ಮೆಂಟಿನ ದಬ್ಬಾಳಿಕಾ ನೀತಿಯನ್ನು ತೀವ್ರವಾಗಿ ಖಂಡಿಸಿ, ನೌಕರರು ಧೈರ್ಯಗೆಡದೆ ಒಂದುಗೂಡಿ ತಮ್ಮ ನ್ಯಾಯವಾದ ಹಕ್ಕುಗಳಿಗಾಗಿ ಮತ್ತು ಬೇಡಿಕೆಗಳಿಗಾಗಿ ಹೋರಾಟ ಮುಂದೆ ಸಾಗಿಸಬೇಕೆಂದು ಕರೆಯಿತ್ತರು. ಈ ತಿಂಗಳ ಅಂತ್ಯದಲ್ಲಿ ಕೂಡಲಿರುವ ಮೈಸೂರು ಶಾಸನ ಸಭೆಯ ಮುಂದೆ ಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಲಾಗಿದೆ.

ವಿಮಾನ ಕಾರ್ಖಾನೆ ನೌಕರರ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ. ಸರಕಾರವು ಕೂಡಲೇ ನೌಕರರ ಮೇಲೆ ಹಾಕಲಾಗಿರುವ ಎಲ್ಲ ಕೇಸುಗಳನ್ನು ಹಿಂತೆಗೆದುಕೊಂಡು, ನೌಕರರಿಗೆ ಅನ್ಯಾಯವಾಗದಂತೆ ಪ್ರವೇಶಿಸಿ ಮ್ಯಾನೇಜ್‌ಮೆಂಟಿನವರು ಸಂಘದೊಡನೆ ಸೂಕ್ತ ಒಪ್ಪಂದಕ್ಕೆ ಬರಲು ನೆರವೀಯಬೇಕೆಂದೂ ಒತ್ತಾಯ ಪಡಿಸುತ್ತೇವೆ.

ಹೋರಾಟ ನಿಧಿಗೆ ಸಹಾಯ

ಸಂಪಾಜೆ ರಬ್ಬರ್ ತೋಟ ಕಾರ್ಮಿಕರ ಹೋರಾಟ ನಿಧಿಗೆ ಸಹಾಯಾರ್ಥವಾಗಿ, ಕೊಡಗು ಜಿಲ್ಲಾ ತೋಟ ಕೆಲಸಗಾರರು ತುಂಬಾ ಸಹಾಯ ಮಾಡಿರುತ್ತಾರೆ, ಈ ಪೈಕಿ ಕೊಡಗು ಜಿಲ್ಲಾ ತೋಟ ಕಾರ್ಮಿಕ ಸಂಘದ ಸೋಮವಾರಪೇಟೆಯ ಶಾಖೆಯು ತನ್ನ ವತಿಯಿಂದ ರೂ 199.75 ನ. ಪೈ. ಯನ್ನು ಇತ್ತಿದೆ.

ಬೆಂಗಳೂರು

ವಿಜಯ ಲಕ್ಷ್ಮಿಹಾಲ್ ಮಾಲಿಕರ ಮನೆಯ ಮುಂದೆ ಸಾಮೂಹಿಕ ಸತ್ಯಾಗ್ರಹ

ತಾ|| 31—1—58ರ ಶುಕ್ರವಾರ ಸಂಜೆ 6-30ಕ್ಕೆ ಚಿಕ್ಕಲಾಲ್‌ಬಾಗಿನಲ್ಲಿ ಬೆಂಗಳೂರು ಸಿಲ್ಕ್ ಕಾರ್ಮಿಕರ ಸಂಘದ ಬಹಿರಂಗ ಸಭೆ ಶ್ರೀ ಎಸ್. ಸೂರ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಶ್ರೀ ಎಸ್. ಸೂರ್ಯನಾರಾಯಣ ರಾವ್ ಮತ್ತು ಜಿ. ಜಯರಾಮ್‌ರವರುಗಳು ಮಾತನಾಡಿದರು. ಈ ಕೆಳಕಂಡ ತೀರ್ಮಾನಗಳು ಪಾಸಾಯಿತು.

1. ಬೆಂಗಳೂರು ಸಿಲ್ಕ್ ಕಾರ್ಮಿಕರ ವಿವಾದಗಳನ್ನು ಅಕ್ರಮವಾಗಿ ಲೇಬರ್ ಟ್ರಿಬ್ಯೂನಲ್‌ರವರು ವಾಪಸ್ ಮಾಡಿರುವುದನ್ನು ಈ ಸಭೆ ಖಂಡಿಸುತ್ತದೆ.

2. ಸರ್ಕಾರ ಈ ವಿವಾದಗಳನ್ನು ಕೂಡಲೇ ಟ್ರಿಬ್ಯೂನಲ್ಲಿಗೆ ಒಪ್ಪಿಸಬೇಕೆಂದು ಈ ಸಭೆ ಒತ್ತಾಯಪಡಿಸುತ್ತದೆ.

3. ಸರ್ಕಾರ ತಂದಿರತಕ್ಕ ಎಕ್ಸ್‌ೈಸ್ ಡ್ಯೂಟಿಯಿಂದಾಗಿ ಸಣ್ಣ ಸಣ್ಣ ಕೈಗಾರಿಕೆಯಲ್ಲಿ ಮುಗ್ಗಟ್ಟು ಉಂಟಾಗಿದೆ. ಆದ್ದರಿಂದ ಈ ಕೂಡಲೇ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ಒದಗಿಸಲು ಎಕ್ಸೈಜ್ ಡ್ಯೂಟಿಯನ್ನು ಪುನರ್‌ಪರಿಶೀಲನೆ ನಡೆಸಬೇಕೆಂದು ಈ ಸಭೆ ಕೇಂದ್ರ ಸರ್ಕಾರವನ್ನು ಪ್ರಾರ್ಥಿಸುತ್ತದೆ.

4. ರರ್ತ ಸಿಲ್ಕ್ ಫ್ಯಾಕ್ಟರಿಯನ್ನು ಅಕ್ರಮವಾಗಿ ಮುಚ್ಚಿರುವುದನ್ನು ಈ ಸಭೆ ಖಂಡಿಸುತ್ತದೆ. ಈ ಕೂಡಲೇ ಫ್ಯಾಕ್ಟರಿ ಬಾಗಿಲನ್ನು ತೆಗೆದು ಕಾರ್ಮಿಕರಿಗೆ ಕೆಲಸ ದೊರಕಿಸಿ ಕೊಡದಿದ್ದರೆ ಬೇರೆ ವಿಧಿಯಿಲ್ಲದೆ ತಾ|| 5-2-58ರಿಂದ ರರ್ತ ಸಿಲ್ಕ್ ಫ್ಯಾಕ್ಟರಿಯ (ವಿಜಯಲಕ್ಷ್ಮೀ ಹಾಲ್) ಮಾಲೀಕರ ಮುಂದೆ ಸಾಮೂಹಿಕ ಸತ್ಯಾಗ್ರಹ ಮಾಡಲು ಈ ಸಭೆ ಬೆಂಬಲ ನೀಡುತ್ತದೆ. ಮೇಲ್ಕಂಡ ಚಳುವಳಿಗೆ ಅವಕಾಶ ಕೊಡದೆ ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಿ, ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಈ ಸಭೆ ಒತ್ತಾಯಪೂರ್ವಕವಾಗಿ ಮನವಿ ಮಾಡುತ್ತದೆ.

ಮಂಗಳೂರು

ಮುನಿಸಿಪಲ್ ಮಜೂರರ ಮುಷ್ಕರ!

ದ. ಕ. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಕಳೆದ ತಿಂಗಳು 22ನೇ ತಾ|| ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಂಗಳೂರಿನ ಮುನಿಸಿಪಲ್ ಮಜೂರರಿಗೆ ಹೊಸ ವೇತನ ಮಟ್ಟ ಹಾಗೂ ತುಟ್ಟಿಭತ್ಯ ಕೊಡಬೇಕೆಂದು ಮಂಗಳೂರು ನಗರ ಸಭೆಯು ನಿರ್ಧರಿಸಿದ್ದರೂ ಮೈಸೂರು ಸರ್ಕಾರವು ಈವರೆಗೆ ಈ ಕಡೆಗೆ ಗಮನ ಕೊಡದಿರುವುದನ್ನು ಪ್ರತಿಭಟಿಸಿ, ಮೈಸೂರು ಸರಕಾರ ಮುನಿಸಿಪಲ್ ಮಜೂರರ ಈ ನ್ಯಾಯವಾದ ಕೇಳಿಕೆಗೆ ಬೇಗನೆ ನಿಗಾ ಕೊಡಬೇಕೆಂದು ಸರಕಾರವನ್ನು ಕೇಳಿಕೊಂಡು ಶ್ರೀಗಳಾದ ಕೆ. ಮೋನಪ್ಪ ಶೆಟ್ಟಿ, ಎ. ಶಾಂತಾರಾಂ ಪೈ, ವಾಮನ ಕೊಡಿಯಾಲಬೈಲ್ ಮೊದಲಾದವರು ಭಾಷಣ ಮಾಡಿದರು. ಭಾಷಣಕರ್ತರು ತಮ್ಮ ಭಾಷಣದಲ್ಲಿ, ಸರಕಾರವು ಮುನಿಸಿಪಲ್ ಮಜೂರರ ಕೇಳಿಕೆಗಳಿಗೆ ಮನ್ನಣೆ ಕೊಡದಿದ್ದಲ್ಲಿ ಇದೇ 8ನೇ ತಾರೀಖಿನಿಂದ ಮಜೂರರು ಮುಷ್ಕರ ಹೂಡುವುದಾಗಿ ಎಚ್ಚರಿಕೆಯಿತ್ತರು. ಮತ್ತು ಈ ರೀತಿ ಆಗದಂತೆ ಮಾಡಲು ಸಾರ್ವಜನಿಕರು ಮುನಿಸಿಪಲ್ ಮಜೂರರ ಕೇಳಿಕೆಗಳು ಈಡೇರುವಂತೆ ಬೆಂಬಲ ನೀಡಬೇಕೆಂದೂ ಅವರು ಜನತೆಯನ್ನು ಪ್ರಾರ್ಥಿಸಿದರು.

ಅನಂತರ ಶ್ರೀ ಕಕ್ಕಿಲ್ಲಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮುನಿಸಿಪಲ್ ಮಜೂರರ ಕೇಳಿಕೆಗಳಿಗೆ ಬೇಗನೆ ಗಮನ ಕೊಡಬೇಕಾದ ಆವಶ್ಯಕತೆಯನ್ನು ವಿವರಿಸಿ ಮೈಸೂರು ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು.

ತಾ. 20-2-58ರಂದು ಕೇಳಿಕೆ ದಿನ

— ದ. ಕ. ಜಿಲ್ಲಾ ಟ್ರೇಡ್‌ಯೂನಿಯನ್ ಕೌನ್ಸಿಲ್ ಸಭೆಯ ಕರೆ —

ದ. ಕ. ಜಿಲ್ಲಾ ಟ್ರೇಡ್‌ಯೂನಿಯನ್ ಕೌನ್ಸಿಲಿನ 5ನೇ ಸಭೆಯು ತಾ. 19-1-58ರಂದು ಬೆಳಿಗ್ಗೆ ಶ್ರೀ ಎ. ಶಾಂತರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ದಶಂಬರ ತಿಂಗಳ ತಾ. 25ರಿಂದ 29ರ ವರೆಗೆ ಎರ್ನಾಕುಲಂನಲ್ಲಿ ಜರಗಿದ ಅ. ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ 25ನೇ ಅಧಿವೇಶನದ ವರದಿಯನ್ನು ಶ್ರೀ ಎ. ಶಾಂತರಾಮ ಪೈಯವರು ಸಭೆಗೊಪ್ಪಿಸಿದರು. ಕಾರ್ಯದರ್ಶಿ ಶ್ರೀ ಮೋನಪ್ಪ ಶೆಟ್ರು ಕೊಟ್ಟ ಜಿಲ್ಲೆಯ ಟಿ. ಯು. ಚಟುವಟಿಕೆಗಳ ವರದಿಯಲ್ಲಿ ಕಳೆದ ಜುಲ್ಯಾ ತಿಂಗಳಲ್ಲಿ ಕೌನ್ಸಿಲ್ ಸರಕಾರದ ಮುಂದಿಟ್ಟಿರುವ 10 ಕೇಳಿಕೆಗಳಲ್ಲಿ ಒಂದನ್ನು ಮಾತ್ರ ಸರಕಾರ ಮಾನ್ಯ ಮಾಡಿದೆ. ಎಂದು ಹೇಳಿದರು. ಪ್ರತಿನಿಧಿಗಳು ತಮ್ಮ ತಮ್ಮ ಯೂನಿಯನ್ ಚಟುವಟಿಕೆಗಳ ವರದಿ ಕೊಟ್ಟ ಬಳಿಕ ಅಧ್ಯಕ್ಷರು ಚರ್ಚೆಗೆ ಉತ್ತರ ಕೊಟ್ಟು ಮುಕ್ತಾಯಗೊಳಿಸಿದರು.

ಜುಲ್ಯಾ ತಿಂಗಳಿಂದ ದಶಂಬರ ವರೆಗಿನ ಕೌನ್ಸಿಲಿನ ಲೆಖ್ಖಪತ್ರವನ್ನು ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಶೆಟ್ಟರು ಸಭೆಯ ಮುಂದಿಟ್ಟಾಗ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಪ್ರಾಂತೀಯ ಸುದ್ದಿ ಸಂಗ್ರಹ

ದ. ಕ. ಜಿಲ್ಲೆಯ 6ನೇ ಮಜೂರ ಪರಿಷತ್ತನ್ನು ಮಾರ್ಚಿ ತಿಂಗಳ ತಾ. 16, 17, 18, ಈ ಮೂರು ದಿನಗಳಲ್ಲಿ ಮಂಗಳೂರಲ್ಲಿ ಕರೆಯಲು ನಿರ್ಧರಿಸಿ, ಸ್ವಾಗತ ಸಮಿತಿಯೊಂದನ್ನು ಚುನಾಯಿಸಲಾಯಿತು.

ಜುಲ್ಯಾ ತಿಂಗಳಲ್ಲಿ ಸೇರಿದ ಕೌನ್ಸಿಲ್ ಸಭೆಯು ಸರಕಾರದ ಮುಂದಿಟ್ಟಿರುವ ಕೇಳಿಕೆಗಳನ್ನು ಈಡೇರಿಸುವ ಕುರಿತು ಮಾನ್ಯ ಮಜೂರ ಮಂತ್ರಿಗಳು ಜಿಲ್ಲೆಯ ಮಜೂರ ವರ್ಗಕ್ಕೆ ಕೊಟ್ಟಿರುವ ಭರವಸೆಯನ್ನು ಪಾಲಿಸದುದಕ್ಕೆ ಸಭೆಯಲ್ಲಿ ವಿಷಾದ ವ್ಯಕ್ತಪಡಿಸಲಾಗಿದೆ. ಅಲ್ಲದೆ ಈ ಕೇಳಿಕೆಗಳನ್ನು ಸರಕಾರ ಮಾನ್ಯ ಮಾಡುವಂತೆ ಒತ್ತಾಯಿಸಲಿಕ್ಕಾಗಿ ಫೆಬ್ರವರಿ 20ರಂದು ಜಿಲ್ಲೆಯಾದಂತ್ಯ ಕೇಳಿಕೆ ದಿನ ಆಚರಿಸಬೇಕೆಂದು ಜಿಲ್ಲೆಯ ಎಲ್ಲಾ ಯೂನಿಯನ್‌ಗಳಿಗೆ ಕರೆಕೊಡಲಾಗಿದೆ. ಅಲ್ಲದೆ ಫೆಬ್ರವರಿ ಮೊದಲ ವಾರದಲ್ಲಿ ನಡೆಯುವ ಮಂಗಳೂರಿನ ಮುನ್ಸಿಪಲ್ ಮಜೂರರ ಮುಷ್ಕರಕ್ಕೆ ಬೆಂಬಲ ನೀಡುವ, ಕಳೆದ 23 ದಿನಗಳಿಂದ ನಡೆಯುತ್ತಿರುವ ಹ್ಯೊಗೆ ಬಜಾರಿನ ಬೀಡಿ ಮಜೂರರ ಮುಷ್ಕರಕ್ಕೆ ಬೆಂಬಲ ನೀಡುವ, ಠರಾವುಗಳನ್ನು ಸಭೆಯಲ್ಲಿ ಅಂಗೀಕರಿಸಲಾಗಿದೆ. ಕೊನೆಗೆ ಧನ್ಯವಾದಗಳೊಂದಿಗೆ ಸಭೆಯು ಕೊನೆಗೊಂಡಿತು.

ಮುಂಬಯಿ

ಗಣರಾಜ್ಯ ದಿನಾಚರಣೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕಮಟಿಪುರ ಶಾಖೆಯಲ್ಲಿ 26ನೇ ತಾ|| ಭಾನುವಾರ ಬೆಳಿಗ್ಗೆ 9 ಗಂಟೆಗೆ ಗಣರಾಜ್ಯ ದಿನದ ಸಮಾರೋಪದ ಅಂಗವಾಗಿ ಧ್ವಜಾರೋಹಣ ಸಮಾರಂಭವು ನಡೆಯಿತು.

ಆ ಸಮಯದಲ್ಲಿ ನೆರೆದಿದ್ದ ಸಭಿಕರನ್ನುದ್ದೇಶಿಸಿ, ಶಾಖೆಯ ಕಾರ್ಯದರ್ಶಿ ಹಾಗೂ ಬೀಡಿ ಮತ್ತು ಹೋಟೆಲ್ ಕೆಲಸಗಾರರ ಕಾರ್ಯಕರ್ತರಲ್ಲೊಬ್ಬರಾದ ಕಾ|| ಸುಂದರ್ ಎ್. ಮೂಡಬಿದ್ರಿಯವರು ಮಾತನಾಡುತ್ತಾ, ಮಜೂರರ ಜೀವನವು ದಿನೇ ದಿನೇ ಕೆಡುತ್ತಲಿದೆ. ನಿರುದ್ಯೋಗವು ದಿನ ಕಳೆದಂತೆ ಹೆಚ್ಚುತ್ತಿದೆ. ಇಂತಹ ಸಮಸ್ಯೆಗಳನ್ನು ಎದುರಿಸಲು ರೈತರು ಮತ್ತು ಮಜೂರರು ಒಗ್ಗಟ್ಟಾಗಿ, ಭುಜಕ್ಕೆ ಭುಜ ಕೊಟ್ಟು, ದೇಶದಲ್ಲಿ ನಿರುದ್ಯೋಗ ಮತ್ತು ನಿರಕ್ಷರತೆಯನ್ನು ನಿರ್ಮೂಲ ಮಾಡಲು ಹೋರಾಡುತ್ತೇವೆಂದು ಈ ದಿನ ನಾವು ಪ್ರತಿಜ್ಞೆ ಮಾಡಬೇಕೆಂದು ಹೇಳಿದರು.

ಭಾರತವು ಸ್ವತಂತ್ರವಾಗಿ ಹತ್ತು ವರ್ಷಗಳಾದರೂ ಗೋವಾ-ಕಾಶ್ಮೀರಗಳ ಪ್ರಶ್ನೆ, ಮತ್ತು ನಮ್ಮೊಳಗೇ ನಡೆಯುತ್ತಿರುವ ಮನೆ ಜಗಳವೆಂದು ಕರೆಯಲ್ಪಡುವ ಪ್ರಾಂತ ಪುನರ್ರಚನೆಯಲ್ಲಿ ಮಹಾರಾಷ್ಟ್ರ ಮತ್ತು ಗುಜರಾತುಗಳಿಗೆ ಆದ ವಂಚನೆ, ಅಂತೆಯೇ ಗಡಿ ನಿರ್ಣಯದ ಪ್ರಶ್ನೆ- ಬೆಳಗಾಂ, ಕಾರವಾರ, ನಿಪ್ಪಾಣಿಯ ಜಗಳ ಹಾಗೂ ಕಾಸರಗೋಡಿನ ಪ್ರಶ್ನೆ, ರೈತ ಮಜೂರರ ಆರ್ಥಿಕ ಬಿಕ್ಕಟ್ಟು, ರಾಷ್ಟ್ರಭಾಷಾ ಪ್ರಶ್ನೆಯ ಮೇಲಣ ಗೊಂದಲ ಇವೆಲ್ಲವುಗಳೂ ಕಾಂಗ್ರೆಸ್ ಸರಕಾರ ಬಿಡಿಸಲಾರದ ಒಗಟಾಗಿಯೇ ಇನ್ನೂ ಇರುವುದು, ನಮಗೆ ದೊರೆತ ಸ್ವಾತಂತ್ರ್ಯದ ಹಾದಿಯಲ್ಲಿ ಅಡ್ಡಗಲ್ಲಾಗಿದೆ ಎಂದು ವಿವರಣಾಪೂರ್ವಕವಾಗಿ ನುಡಿದರು.

ಇವೆಲ್ಲವನ್ನೂ ನಶಿಸಿ, ಹೊಸ ಆಧುನಿಕ ಭಾರತವನ್ನು ಕಟ್ಟಲು ಭಾರತೀಯ ಮಜೂರ - ರೈತರಿಂದಲೇ ಸಾಧ್ಯವೇ ಹೊರತು ಮತ್ತಾರಿಂದಲೂ ಸಾಧ್ಯವಿಲ್ಲ ಎಂದರು.

ಅನಂತರ, ಕಾ|| ಪ್ರಭಾಕರಚಿಂತಾರವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾ|| ಸಿದ್ರಾಮ್ ಬನ್ನಾರವರು ವಹಿಸಿದ್ದರು.

ಸಂಜೆ 4 ಗಂಟೆಗೆ ಕಾ|| ಬಿ.ಡಿ. ಪರಬ್‌ರವರು "ಸ್ವಾತಂತ್ರ್ಯದ 10 ವರ್ಷಗಳು" ಎಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡಿದರು ನಂತರ ಕಾರ್ಯದರ್ಶಿಯವರು ನೆರೆದಿದ್ದ ಸಭಿಕರಿಗೆ ಧನ್ಯವಾದವನ್ನಿತ್ತರು.

ಬೆಂಗಳೂರು ಉತ್ತರ ತಾಲೂಕು

ಗಣರಾಜ್ಯ ದಿನದಂದು ಪೀಣ್ಯಾ ಗ್ರಾಮದ ರೈತರ ಸಭೆ

ಬೆಂಗಳೂರು ಉತ್ತರ ತಾಲ್ಲೂಕಿನ ಪೀಣ್ಯಾ ಗ್ರಾಮದ ರೈತರು ಗಣರಾಜ್ಯದಿನದಂದು ಸಭೆ ಸೇರಿದರು. ವಿ. ನರಸಿಂಗಯ್ಯನವರು ಅಧ್ಯಕ್ಷತೆ ವಹಿಸಿದರು.

ಈ ಗಣರಾಜ್ಯ ದಿನವು ನಿಜವಾಗಿಯೂ ಜನರಿಗೆ ಮಹತ್ವಪೂರ್ಣವಾಗಿ ತೋರಬೇಕಾದರೆ, ಪಂಚವಾರ್ಷಿಕ ಯೋಜನೆಯು ಕೈಗೂಡಬೇಕಾದರೆ ದೇಶದ ಬೆನ್ನೆಲುಬಾದ ರೈತನಿಗೆ ಭೂಮಿ ದೊರಕಬೇಕು. ರೈತನ ಆರ್ಥಿಕ ಮುಗ್ಗಟ್ಟು ಮುರಿಯುವಂತಾಗಬೇಕು ಎಂದು ಭಾಷಣ ಕರ್ತರಾದ ಪಿ. ಮರಿದಾಸರು ನುಡಿದರು. ಕೇರಳಕ್ಕೆ ಹೋಗಿದ್ದಾಗ ಅಲ್ಲಿನ ಜನಪ್ರಿಯ ಕಮ್ಯೂನಿಸ್ಟ್ ಸರ್ಕಾರ ಕಾನೂನು ಪ್ರಕಾರ ಜನತೆಗೆ - ರೈತ ಕಾರ್ಮಿಕರಿಗೆ ಬೇಕಾಗಿ ಏನೆಲ್ಲಾ ಹಿತಗಳನ್ನು ಮಾಡಿರುವರೆಂದೂ ಅಲ್ಲಿನ ಜನತೆಯ ಪ್ರತಿಕ್ರಿಯೆ ಏನೆಂಬುದನ್ನು ವಿವರಿಸಿದರು.

ಬೆಂಗಳೂರಿನ ಕಾರ್ಪೊರೇಟರುಗಳಾದ ಶ್ರಿ ಡಿ. ಎಸ್. ಶ್ರೀರಾಮುಲುರವರು ಮಾತನಾಡುತ್ತಾ 'ಈ ದಿನದ ಉತ್ಸವದಲ್ಲಿ ಜನತೆಯು ಅಷ್ಟೊಂದು ಉತ್ಸಾಹದಿಂದ ಭಾಗವಹಿಸಿರುವುದು ಕಾಣುವುದಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಸರಕಾರವು ಜನ ಸಾಮಾನ್ಯರ ಜೀವನ ಪರಿಸ್ಥಿತಿಯನ್ನು ಉತ್ತಮಗೊಳಿಸದೇ ಇರುವುದಾಗಿದೆ. ಅದರಲ್ಲೂ ದೇಶದಲ್ಲಿ ಮುಕ್ಕಾಲು ಮೂರು ಭಾಗಕ್ಕಿಂತಲೂ ಹೆಚ್ಚಿನ ಸಂಖ್ಯೆಯ ರೈತ

(೮ನೇ ಪುಟ ನೋಡಿ)

ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿ ಪ್ರಾಂತ ಸಮ್ಮೇಳನದ ನಿರ್ಣಯಗಳು

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಈ ಕರ್ನಾಟಕ ಪ್ರಾಂತ ಸಮ್ಮೇಳನವು ಮೈಸೂರು ಸರಕಾರದ ಪ್ರಜಾಪ್ರಭುತ್ವ ವಿರೋಧಿ ಹಾಗು ಪ್ರತಿಗಾಮಿ ಧೋರಣೆಗಳ ಬಗ್ಗೆ ಕಳವಳಪಡುತ್ತದೆ. ಸರಕಾರದ ಈ ಧೋರಣೆಗಳ ಫಲವಾಗಿ ಜನರ ಕಷ್ಟಗಳು ಹೆಚ್ಚಾಗುತ್ತಿವೆ, ಅಲ್ಲದೆ ಪ್ರಾಂತದ ಹಿಂದುಳಿದಿರುವಿಕೆಯು ಹಾಗೆಯೇ ಉಳಿದಿರುತ್ತದೆ. ಕರ್ನಾಟಕ ಏಕೀಕರಣದಿಂದಾಗಿ ನಮ್ಮ ಪ್ರಾಂತದ ಸರ್ವತೋಮುಖ ಅಭಿವೃದ್ಧಿಯನ್ನು ಬೇಗನೆ ಸಾಧಿಸುವುದಕ್ಕೆ ಉಂಟಾಗಿರುವ ಮಹತ್ತಾದ ಸದವಕಾಶಗಳು ಪೂರ್ತಿಯಾಗಿ ಉಪಯೋಗಿಸಲ್ಪಡುವುದಿಲ್ಲ. ಜನಸಮೂಹದ ಆಕಾಂಕ್ಷೆ ಹಾಗು ನಿರೀಕ್ಷೆಗಳು ಬರಿದಾಗುತ್ತಿವೆ.

ರಾಜ್ಯದ ಆಡಳಿತಾಂಶವು ತೀರಾ ದಕ್ಷತೆ ಇಲ್ಲದ್ದೂ ಶಿಥಿಲವಾಗಿಯೂ ಇದೆ. ಲಂಚಬಡಕತನ, ಸ್ವಜನ ಪಕ್ಷಪಾತ ಮತ್ತು ನೀತಿಬಾಹಿರತೆ ಮೇಲಿಂದ ಕೆಳಗಿನವರೆಗೆ ಸಾರ್ವತ್ರಿಕವಾಗಿ ಹಬ್ಬಿಕೊಂಡಿವೆ ಮತ್ತು ಹೆಚ್ಚಾಗುತ್ತಿದೆ. ಆಡಳಿತಾಂಗದಲ್ಲಿ ಸ್ಥಾಪಿತ ಹಕ್ಕುದಾರರ ಹಾಗು ಕಾಂಗ್ರೆಸ್ ಮುಖಂಡರ ಹಿಡಿತ ಬಲವಾಗಿದೆ ಮತ್ತು ಅದು ಅವರ ಸ್ವಾರ್ಥದ ಸಲುವಾಗಿ ದುರುಪಯೋಗ ಮಾಡಲ್ಪಡುತ್ತದೆ.

ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರಕಾರವು ಅಂಗೀಕರಿಸಿರುವ ಯೋಜನೆ ಹಾಗು ಅನುಸರಿಸುತ್ತಿರುವ ಕ್ರಮ ಅಸಮರ್ಪಕವೂ ಅತೃಪ್ತಿಕರವೂ ಆಗಿವೆ. ಸರಕಾರದ ಅಸಮರ್ಥತೆಯಿಂದಾಗಿ, ಅನೇಕ ಕೆಲಸಗಳ ಬಗ್ಗೆ ಮಂಜೂರಾಗಿದ್ದ ಹಣವನ್ನು ಕೂಡ ವಿನಿಯೋಗಿಸದೆ ಕಳೆದುಕೊಳ್ಳಲಾಗಿದೆ. ಅಧಿಕಾರದಲ್ಲಿರುವ ಪಕ್ಷ ಮತ್ತು ಒಳ ಗುಂಪಿನ ಸ್ವಾರ್ಥದ ದೃಷ್ಟಿಯಿಂದ ಅಭಿವೃದ್ಧಿ ಯೋಜನೆಗಳನ್ನೂ ಅವುಗಳಿಗೆ ಮೀಸಲಾಗಿರುವ ಹಣವನ್ನೂ ಬಹಳ ಮಟ್ಟಿಗೆ ಉಪಯೋಗಿಸಲಾಗುತ್ತಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಕಷ್ಟು ಹಣವನ್ನು ಕೇಂದ್ರದಿಂದ ಪಡೆಯಲು ಮೈಸೂರು ಸರಕಾರಕ್ಕೆ ಸಾಧ್ಯವಾಗಿರುವುದಿಲ್ಲ. ಯೋಜನೆಯ ಮೂರನೆಯ ವರ್ಷದ ಬಗ್ಗೆ ಕೇಂದ್ರದಿಂದ ಬೇಡಿರುವ ಹಣದಲ್ಲಿ ದೊಡ್ಡ ಪ್ರಮಾಣದ ಕಡಿತ ಮಾಡಲಾಗಿರುವುದು ಖಂಡನೀಯವಾಗಿದೆ. ಇದು ಕರ್ನಾಟಕದ ಜನತೆಗೆ ದೊಡ್ಡ ಅಪರಾಧ ಮತ್ತು ಅಪಮಾನ. ಇದಕ್ಕೆ ಪ್ರಾಂತ ಸರಕಾರದ ಬಲಹೀನತೆಯೇ ಮುಖ್ಯ ಕಾರಣವಾಗಿದೆ. ಹಾಸನ-ಮಂಗಳೂರು ಮತ್ತಿತರ ಅತ್ಯಾವಶ್ಯಕ ರೈಲುಮಾರ್ಗಗಳ ರಚನೆಯನ್ನೂ ಪಶ್ಚಿಮ ಕರಾವಳಿಯಲ್ಲೊಂದು ಪ್ರಬುದ್ಧ ಬಂದರದ ರಚನೆಯನ್ನೂ ಇನ್ನೂ ಹಲವಾರು ಜೀವಾಧಾರ ಕಾರ್ಯಗಳನ್ನೂ ದ್ವಿತೀಯ ಯೋಜನೆಯಲ್ಲಿ ಸೇರಿಸಲಾಗಿರುವುದಿಲ್ಲ. ಮಾತ್ರವಲ್ಲ, ದ್ವಿತೀಯ ಯೋಜನೆಯಲ್ಲಿ ಸೇರಿಸಲಾಗಿರುವ ಅನೇಕ ಕಾರ್ಯಗಳನ್ನು ಆರಂಭಿಸದೆಯೂ ಮುಂದರಿಸಿದೆಯೂ ಕೈಬಿಡಲಾಗುತ್ತಿದೆ. ಇದರಿಂದಾಗಿ ಪ್ರಾಂತ ಅಭಿವೃದ್ಧಿಯು ತಡೆಹಿಡಿಯಲ್ಪಟ್ಟಿದೆಯಲ್ಲದೆ ಜನರಲ್ಲಿ ಅತೃಪ್ತಿ ಉಂಟಾಗಿದೆ.

ಜಿಲ್ಲಾ ಬೋರ್ಡುಗಳ ಚುನಾವಣೆ ನಡೆಸದಿರುವುದು, ಕೋಲಾರ ಬಂಗಾರದ ಗನಿ ಪ್ರದೇಶದಲ್ಲಿ ಮುನ್ಸಿಪಾಲಿಟಿಯನ್ನು ರಚಿಸದಿರುವುದೂ, ಸರಕಾರದಿಂದ ನೇಮಿಸಲ್ಪಟ್ಟ ಸದಸ್ಯರ ಬಹುಮತವಿರುವ 'ಸ್ಯಾನಿಟರಿ ಬೋರ್ಡು' ಮುಂದರಿಸಲ್ಪಡುತ್ತಿರುವುದೂ, ಮುನ್ಸಿಪಾಲಿಟಿ ಮತ್ತು ಪಂಚಾಯತು ಬೋರ್ಡುಗಳ ಅಧಿಕಾರವನ್ನು ಅತ್ಯಂತ ಪರಿಮಿತವಾಗಿಯೇ ಮುಂದರಿಸುವುದಲ್ಲದೆ ಅವುಗಳ ತೀರ್ಮಾನಗಳಿಗೆ ಮಂಜೂರಾತಿ ಕೊಡದಿರುವುದೂ, ಸ್ಥಳೀಯ ಸಂಸ್ಥೆಗಳ ಆಡಳಿತೆಯಲ್ಲಿ ಅಧಿಕಾರಿಗಳ ಹಸ್ತಕ್ಷೇಪ ನಡೆಯುವುದೂ ಸರಕಾರದ ಪ್ರಜಾಪ್ರಭುತ್ವ ವಿರೋಧೀ ನೀತಿಯನ್ನು ಎತ್ತಿ ತೋರಿಸುತ್ತವೆ.

ಮೈಸೂರು ಸರಕಾರದ ಜನವಿರೋಧಿ ನೀತಿಗಳ ಖಂಡನೆ

ಕಾರ್ಮಿಕ ರಂಗದಲ್ಲಿ ಸರಕಾರವು ಕಾರ್ಮಿಕರಿಗೆ ವಿರೋಧವಾದ ನೀತಿಯನ್ನು ಅನುಸರಿಸುತ್ತಿದೆ. ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ನಿರಾಕರಿಸುವುದು, ವಿವಾದಗಳ ತೀರ್ಮಾನಕ್ಕೆ ಸಕಾಲದಲ್ಲಿ ಕ್ರಮವಹಿಸದಿರುವುದು, ನೇರವಾದ ಮಾತುಕತೆಗಳಿಂದ ಬೇಡಿಕೆಗಳನ್ನು ಪಡೆಯಲು ಕಾರ್ಮಿಕ ಸಂಘಗಳು ನಡೆಸುವ ಪ್ರಯತ್ನಗಳನ್ನು ಮೊಟಕು ಮಾಡುವುದು, ಸ್ಥಳೀಯ ಸಂಸ್ಥೆಗಳ ಕಾರ್ಮಿಕರ ಮತ್ತು ನೌಕರರ ವಿಚಾರದಲ್ಲಿ ಆ ಸಂಸ್ಥೆಗಳು ಕೊಡಲು ನಿರ್ಣಯ ಮಾಡುವ ಸವಲತ್ತುಗಳಿಗೂ ಮಂಜೂರಾತಿ ಕೊಡದಿರುವುದು, ಹೋರಾಟಗಳನ್ನೂ ಚಳುವಳಿಗಳನ್ನೂ ದಬ್ಬಾಳಿಕೆಯಿಂದ ಸದೆಬಡೆಯುವುದೇ ಮೊದಲಾದ ಕ್ರಮಗಳನ್ನು ಸರಕಾರ ಅನುಸರಿಸುತ್ತದೆ. ಸರಕಾರೀ ನೌಕರರ ಹಾಗು ಸರಕಾರೀ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳ ಅಧ್ಯಾಪಕರ ಸಂಬಳ ಸವಲತ್ತುಗಳ ಬೇಡಿಕೆಗಳನ್ನು ನಿರಾಕರಿಸುವುದು, ಸರಕಾರೀ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ಬೋನಸ್ಸು ಕೊಡಕೂಡದೆಂಬ ನಿರ್ಣಯ ಮಾಡಿರುವುದು, ಇನ್ನೂ ಅನೇಕ ರೀತಿಗಳಲ್ಲಿ ಕಾರ್ಮಿಕ ವಿರೋಧಿ ನೀತಿಯನ್ನು ಸರಕಾರ ಅನುಸರಿಸುತ್ತಿದೆ. ಮೈಸೂರಿಗೆ ಸೇರಿದ ಪ್ರದೇಶಗಳಿಂದ ಬಂದಿರುವ ಸರಕಾರೀ ನೌಕರರಲ್ಲಿ ತೀವ್ರ ಅತೃಪ್ತಿಗೂ ನಿರಾಶೆಗೂ ಸರಕಾರದ ನೀತಿ ಕಾರಣವಾಗಿದೆ.

ರೈತರ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೂ ವ್ಯವಸಾಯಕ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಅತ್ಯವಶ್ಯಕವಾದ ಪ್ರಗತಿಶೀಲ ಭೂಸುಧಾರಣೆಯನ್ನು ತರುವುದಕ್ಕೆ ಸರಕಾರ ತಪ್ಪಿದೆ. ನಿತ್ಯ ಉಪಯೋಗ ವಸ್ತುಗಳ ಕ್ರಯಗಳು ಏರುತ್ತಿವೆ. ಪ್ರಾಂತದ ಹಲವು ಪ್ರದೇಶಗಳಲ್ಲಿ ಆಹಾರದ ಕೊರತೆ ತಲೆದೋರಿದೆ. ಇದರಿಂದ ಜನರು ಕಷ್ಟಕ್ಕೆ ಗುರಿಯಾಗಿದ್ದಾರೆ.

ರಾಷ್ಟ್ರಾಭಿವೃದ್ಧಿಯ ಪರಿಶ್ರಮದಲ್ಲಿ ಎಲ್ಲ ಪಕ್ಷಗಳ ಸಹಕಾರವೂ ಅವಶ್ಯವಿರುವ ಈ ಸಂದರ್ಭದಲ್ಲಿ, ಸರಕಾರವು ಎಲ್ಲ ಮಟ್ಟದ ಅಭಿವೃದ್ಧಿ ಸಲಹಾ ಸಮಿತಿಗಳಲ್ಲೂ ಕಾಂಗ್ರೆಸಿನವರನ್ನೇ ತುರುಕಿಸಿ ಇತರ ಪಕ್ಷಗಳನ್ನು ಹೊರಗಿಡುತ್ತಿದೆ.

ಸರಕಾರದ ಈ ಪ್ರಜಾಪ್ರಭುತ್ವ ವಿರೋಧಿ ಮತ್ತು ಜನದ್ರೋಹೀ ಧೋರಣೆಯನ್ನು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಈ ಕರ್ನಾಟಕ ಪ್ರಾಂತ ಸಮ್ಮೇಳನವು ಖಂಡಿಸುತ್ತದೆ. ಈ ಧೋರಣೆಗಳನ್ನು ಪ್ರತಿಭಟಿಸಿ ತಡೆಹಿಡಿಯುವುದಲ್ಲದೆ, ಪ್ರಜಾಪ್ರಭುತ್ವವನ್ನೂ ಜನರ ಹಿತಗಳನ್ನೂ ರಕ್ಷಿಸಲು ಹಾಗೂ ಸರಕಾರ ಪ್ರಗತಿಶೀಲ ಧೋರಣೆಗಳನ್ನೂ ಅನುಸರಿಸುವಂತೆ ನಿರ್ಬಂಧಿಸಲು ಕಮ್ಯೂನಿಸ್ಟ್ ಪಾರ್ಟಿಯೂ ಸಮಗ್ರ ಜನತೆಯೂ ಸಂಘಟಿತವಾದ ಮತ್ತು ವಿಶಾಲವಾದ ಚಳವಳಿ ನಡೆಸಬೇಕೆಂದು ಈ ಸಮ್ಮೇಳನವು ಕರೆಕೊಡುತ್ತದೆ.

ಕರ್ನಾಟಕದ ಅಭಿವೃದ್ಧಿಯನ್ನು ಸಾಧಿಸುವ ಕಾರ್ಯದಲ್ಲಿ ಎಲ್ಲ ಪಕ್ಷಗಳ ಸಹಕಾರವನ್ನು ಪಡೆಯುವುದಕ್ಕೆ ಸರ್ವಪಕ್ಷ ಸಮ್ಮೇಳನವೊಂದನ್ನು ಕರೆಯಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸರಕಾರವು ನೇಮಿಸುವ ಸಲಹಾ ಸಮಿತಿಗಳಲ್ಲೂ, ವಿಚಾರಣಾ ಸಮಿತಿಗಳೇ ಮೊದಲಾದವುಗಳಲ್ಲೂ ಎಲ್ಲ ಪಕ್ಷಗಳಿಗೂ ಪ್ರಾತಿನಿಧ್ಯ ಕೊಡಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯಪಡಿಸುತ್ತದೆ.

ಈ ಕೇಳಿಕೆಗಳ ತಳಹದಿಯಲ್ಲಿ ಜನರ ಚಳುವಳಿಯನ್ನು ಆರಂಭಿಸುವ ಉದ್ದೇಶದಿಂದ ಇದೇ ಫೆಬ್ರುವರಿ ತಾ 23ರಂದು ಪ್ರಾಂತದ ಆದ್ಯಂತ "ಪ್ರತಿಭಟನಾ ದಿನ" ಆಚರಿಸಲ್ಪಡಬೇಕೆಂದೂ, ಆ ಸಂಬಂಧ ಎಲ್ಲ ಕಡೆಗಳಲ್ಲೂ ಎಲ್ಲ ಸಾಮೂಹಿಕ ಸಂಸಂಘ ಸಂಸ್ಥೆಗಳ ಮತ್ತು ಎಲ್ಲ ಪ್ರಜಾಪ್ರಭುತ್ವ ಜನ ವಿಭಾಗಗಳ ಸಹಕಾರದೊಡನೆ ಸಭೆ, ಮತ್ತು ಪ್ರದರ್ಶನ ಇತ್ಯಾದಿಗಳನ್ನು ನಡೆಸಬೇಕೆಂದೂ ಈ ಸಮ್ಮೇಳನವು ಕರೆಕೊಡುತ್ತದೆ.

ಟಿ. ಟಿ. ಕೆ. ಮತ್ತು ಮುಂಧ್ರಾ ಪ್ರಕರಣದ ಹೊಣೆಗಾರರನ್ನು ಶಿಕ್ಷಿಸಬೇಕು

ಮುಂಧ್ರಾ ಪ್ರಕರಣದಲ್ಲಿ ಕಂಡು ಬಂದಿರುವಂತೆ ತನ್ನ ಹೊಣೆಗಾರಿಕೆಯನ್ನು ಕಡೆಗಾಣಿಸಿ ಅಧಿಕಾರವನ್ನು ದುರುಪಯೋಗಿಸಿ ರಾಷ್ಟ್ರದ್ರೋಹ ಮಾಡಿದ ಟಿ. ಟಿ. ಕೃಷ್ಣಮಾಚಾರಿಯರನ್ನು ಕೇಂದ್ರ ಮಂತ್ರಿಮಂಡಲದಿಂದ ಹೊರದೂಡಬೇಕೆಂದೂ ಅವರನ್ನು ಮುಂಧ್ರಾ ಪ್ರಕರಣಕ್ಕೆ ಹೊಣೆಗಾರರಾಗಿರುವ ಎಚ್. ಎಂ. ಪಟೇಲ್ ಮತ್ತು ಇತರ ಅಧಿಕಾರಿಗಳನ್ನೂ ವಿಚಾರಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದೂ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಈ ಕರ್ನಾಟಕ ಸಮ್ಮೇಳನವು ಕೇಂದ್ರ ಸರಕಾರವನ್ನು ಒತ್ತಾಯಪೂರ್ವಕ ಕೇಳಿಕೊಳ್ಳುತ್ತದೆ.

ಭೂಸುಧಾರಣೆಯ ಬಗ್ಗೆ

ಕರ್ನಾಟಕದ ಆದ್ಯಂತ ಅನ್ವಯಿಸುವ ಸಮಗ್ರವಾದ ಮತ್ತು ಪ್ರಗತಿಶೀಲವಾದ ಭೂಸಂಬಂಧ ಶಾಸನವನ್ನು ಮಂಜೂರು ಮಾಡುವ ವಿಚಾರದಲ್ಲಿ ಮೈಸೂರು ಸರಕಾರವು ಕಾಲಕಳೆಯುವ ಧೋರಣೆಯನ್ನು ತಳೆದಿದೆ. ಈಗ ಜಾರಿಯಲ್ಲಿರುವ ಕಾನೂನುಗಳನ್ನು ಕೂಡ ರೈತರಿಗೆ ಪ್ರಯೋಜನವಾಗುವಂತೆ ಪ್ರಾಯೋಗಿಕವಾಗಿ ಅಮಲಿನಲ್ಲಿ ತರಲು ಸರಕಾರ ಕ್ರಮ ವಹಿಸುವುದಿಲ್ಲ. ಅಧಿಕಾರಿ ವರ್ಗದಲ್ಲಿ ಉಚ್ಚಮಟ್ಟದಲ್ಲಿ ಇರುವವರು ರೈತರಿಗೆ ವಿರೋಧವಾಗಿ ಜಮೀನ್ದಾರರ ಪಕ್ಷ ವಹಿಸುವ ಕ್ರಮ ಅನುಸರಿಸುತ್ತಾರೆ. ಸರಕಾರದ ವಶದಲ್ಲಿರುವ ಬಂಜರು ಜಮೀನುಗಳನ್ನು ಭೂರಹಿತ ಕೃಷಿ ಕೂಲಿಗಾರರಿಗೂ ಬಡ ರೈತರಿಗೂ ಹಂಚುವುದರ ಬದಲು ಭೂಮಾಲಿಕರಿಗೆ ಕೊಡಲಾಗುತ್ತಿದೆ. ತಗಾಯಿ ಸಾಲ, ಬೀಜ, ಗೊಬ್ಬರ ಮತ್ತಿತರ ಸಲಕರಣೆಗಳನ್ನು ಬೇಸಾಯಗಾರ ರೈತರಿಗೆ ಒದಗಿಸದೆ, ಅವುಗಳನ್ನೆಲ್ಲ ರೈತರ ಸುಲಿಗೆಗೆ ಬಳಸುವ ಭೂಮಾಲಿಕರಿಗೆ ಒದಗಿಸಲಾಗುತ್ತದೆ.

ಭೂಸುಧಾರಣೆಯ ಬಗ್ಗೆ ಜತ್ತಿ ಸಮಿತಿ ಕೊಟ್ಟಿರುವ ವರದಿಯಲ್ಲಿ ಹಿಡುವಳಿಯ ಪರಿಮಿತಿ ನಿರ್ಣಯಿಸಬೇಕೆಂದೂ, ರೈತರು ಹೊಲದ ಒಡೆತನ ಪಡೆಯುವುದಕ್ಕೆ ಅವಕಾಶ ಕೊಡಬೇಕೆಂದೂ, ಗೇಣಿಗೆ ಪರಮಾವಧಿ ನಿರ್ಣಯಿಸಬೇಕೆಂದೂ ಹೇಳಿದೆ. ಈ ಎಲ್ಲ ಸೂಚನೆಗಳನ್ನು ಸಂಪೂರ್ಣವಾಗಿ ವಿರೋಧಿಸಿ, ಈಗ ಇರುವ ಸ್ಥಿತಿಯನ್ನೇ ಮುಂದುವರಿಸಬೇಕೆಂದು ಭೂಮಾಲಿಕರು ಚಳುವಳಿ ನಡೆಸುತ್ತಿದ್ದಾರೆ. ಅದೇ ಸಮಯದಲ್ಲಿ ಜತ್ತಿ ಸಮಿತಿಯ ವರದಿಯಲ್ಲೂ ಈಗ ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಕಾಯಿದೆಗಳ ಕೆಲವು ಉತ್ತಮ ಭಾಗಗಳನ್ನು ರೈತರಿಗೆ ಪ್ರತಿಕೂಲವಾಗುವ ರೀತಿಯಲ್ಲಿ ಬದಲಿಸುವಂಥ ಕೆಲವು ಸೂಚನೆಗಳಿವೆ. ಅಲ್ಲದೆ ಭೂಮಾಲಿಕರು ರೈತರನ್ನು ಹೊಲಗಳಿಂದ ಹೊರದೂಡುತ್ತಿದ್ದಾರೆ; ಸುಳ್ಳು ದಾಖಲೆಗಳನ್ನು ತಯಾರಿಸುತ್ತಿದ್ದಾರೆ; ಜಮೀನನ್ನು ಬೇಕು ಬೇಕಾದವರೊಳಗೆ ಬಿನಾಮಿಯಾಗಿ ಹಂಚಿಕೊಳ್ಳುತ್ತಿದ್ದಾರೆ. ಇದಕ್ಕೆಲ್ಲ ಸರಕಾರವು ಧಾರಾಳವಾಗಿ ಅವಕಾಶ ಕೊಡುತ್ತಿವೆ.

ಈ ಸಂದರ್ಭದಲ್ಲಿ (1) ಸಾಗುವಳಿ ಜಮೀನುಗಳಿಂದಲೂ ವಸತಿ – ವಠಾರಗಳಿಂದಲೂ ಯಾವುದೇ ಕಾರಣದಿಂದ

(೧೦ನೇ ಪುಟ ನೋಡಿ)

(೨ನೇ ಪುಟದಿಂದ)

ಮಾಡದಿದ್ದಲ್ಲಿ ಅವರನ್ನು ಮಂತ್ರಿಮಂಡಲದಿಂದ ಉಚ್ಚಾಟನೆ ಮಾಡುವುದು ಅಗತ್ಯ.

ಮುಂಧ್ರಾ ಪ್ರಕರಣದಲ್ಲಿ ಬಹಿರಂಗವಾಗಿರುವ ವಿಷಯಗಳೆಲ್ಲವನ್ನು ಪರಿಶೀಲಿಸಿದಲ್ಲಿ ಟಿ. ಟಿ. ಕೆ. ಮತ್ತು ಪಟೇಲ್ (ಕಾರ್ಯದರ್ಶಿ) ಮತ್ತಿರರ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯಾಂಗ ರೀತ್ಯ ಕ್ರಮ ತೆಗೆದುಕೊಳ್ಳುವುದಗತ್ಯ. ಸರಕಾರ ಇದನ್ನು ಮಾಡುವುದೇ ?

ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನದ ಕರೆ

(೧ನೇ ಪುಟದಿಂದ)

ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನೂ ಪ್ರಾಂತದ ಹಲವು ಭಾಗಗಳಲ್ಲಿ ಕೆಲಸಗಾರರ ಮೇಲೆ ಸರಕಾರ ಮತ್ತು ಮಾಲಿಕರು ನಡೆಸುತ್ತಿರುವ ದಬ್ಬಾಳಿಕೆಯನ್ನು ಇನ್ನೊಂದು ನಿರ್ಣಯದಲ್ಲಿ ಖಂಡಿಸಲಾಯಿತು.

ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಒದಗಿಸಬೇಕೆಂದೂ, ಗುಲ್ಬರ್ಗಾ, ಬಳ್ಳಾರಿ, ಮತ್ತಿತರ ಕಡೆಗಳಲ್ಲಿ ಹಿಂದಿನ ಕಂದಾಯ, ತಗಾಯಿ ಮುಂತಾದುವುಗಳನ್ನು ಮಾಫಿ ಮಾಡಬೇಕೆಂದೂ ಸಮ್ಮೇಳನ ಒತ್ತಾಯ ಪಡಿಸಿದೆ.

ಕೇರಳ ಸರಕಾರವನ್ನು ಅಭಿನಂದಿಸುವ ಮತ್ತು ಟಿ. ಟಿ. ಕೆ. ಯವರನ್ನು ಮಂತ್ರಿ ಮಂಡಳದಿಂದ ತೆಗೆದು ಹಾಕಿ, ಅವರನ್ನು ಇತರ ಮುಂಧ್ರಾ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಕೂಡಲೇ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಬೇಕೆಂದೂ ತೀರ್ಮಾನಿಸಲಾಯಿತು.

ಕೊಡಗಿನ ಪೊನ್ನಂಪೇಟೆಯ ಪಾರ್ಟಿ ಕಾರ್ಯಕರ್ತರಾದ ಶ್ರೀ ನರೇಂದ್ರರ ನಿಧನದ ಬಗ್ಗೆ ಸಂತಾಪ ಸೂಚಿಸಿದ್ದಲ್ಲದೆ ಅವರನ್ನು ಕೊಲೆ ಮಾಡಿದವರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವಾಯಿತು.

ಏಪ್ರಿಲ್ ತಿಂಗಳಲ್ಲಿ ಅಮೃತ್‌ಸರದಲ್ಲಿ ನಡೆಯುವ ಅಖಿಲ ಭಾರತ ಪಾರ್ಟಿ ಅಧಿವೇಶನಕ್ಕೆ ಶ್ರೀ ಕಕ್ಕಿಲ್ಲಾಯ, ಎಂ. ಸಿ. ನರಸಿಂಹನ್, ಎ. ಕೃಷ್ಣಶೆಟ್ಟಿ, ಎ. ಶಾಂತಾರಾಂ ಪೈ, ಡಾಕ್ಟರ್ ನಂಜುಂಡೇಶ್ವರ ಇವರನ್ನು ಪ್ರತಿನಿಧಿಗಳಾಗಿಯೂ, ಅಬ್ದುಲ್ ಕರೀಂ ಮತ್ತು ಎಸ್. ಚೌರಿದಾಸ್‌ರವರನ್ನು ಬದಲಿ ಪ್ರತಿನಿಧಿಗಳನ್ನಾಗಿಯೂ ಆರಿಸಿದ ನಂತರ ಅಂತರ ರಾಷ್ಟ್ರೀಯ ಗೀತೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಬಹಿರಂಗ ಅಧಿವೇಶನ

ತಾ॥ 31ರಂದು ಸಂಜೆಗೆ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಬಹಿರಂಗ ಅಧಿವೇಶನವು ಶ್ರೀ ಎಂ. ಸಿ. ನರಸಿಂಹನ್, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗೆ ನಗರದ ನಾನಾ ಭಾಗಗಳಿಂದ ಭಾರಿ ಮೆರವಣಿಗೆಗಳು ಬಂದಿದ್ದುವು. ಅನೇಕ ವರ್ಷಗಳಿಂದ ಜನತೆಗೋಸ್ಕರ ದುಡಿದಿರುವ ಕಮ್ಯೂನಿಸ್ಟ್ ಪಾರ್ಟಿಯು ಈ ಸಭೆಗೆ ಸಹಸ್ರಾರು ಕಾರ್ಮಿಕರೂ, ರೈತರು ಮತ್ತಿತರನ್ನೊಳಗೊಂಡ ಪ್ರಚಂಡ ಮೆರವಣಿಗೆ ನಡೆಯಿತು. ಮುಖ್ಯವಾಗಿ ಮಂಗಳೂರಿನ ಮತ್ತಿತರ ಕಡೆಯ ರೈತ-ಕಾರ್ಮಿಕರ ಸಂಘಟಿತ ಶಕ್ತಿಯ ಪ್ರದರ್ಶನವಾಯಿತು. ಸಾವಿರಾರು ಸ್ತ್ರೀಪುರುಷರು ಕೆಂಪು ಬಾವುಟಗಳೊಂದಿಗೆ; ಘೋಷಣೆಗಳನ್ನು ಹಾಕುತ್ತಾ ಕಹಳೆವಾದ್ಯಗಳೊಂದಿಗೆ ಮೆರವಣಿಗೆಯಲ್ಲಿದ್ದರು. ಅದು ಸುಮಾರು ಎರಡು ಮೈಲಿ ಉದ್ದವಿತ್ತು. ಮೂರು-ನಾಲ್ಕು ಮೈಲಿಗಳಷ್ಟು ದೂರದ ಕಾರ್ಖಾನೆಗಳಿಂದಲೂ, ಉಳ್ಳಾಲ, ಬಂಟ್ವಾಳ, ಪಾಣೆ ಮಂಗಳೂರು ಮುಂತಾದ ದೂರ ದೂರದ ಊರುಗಳಿಂದಲೂ ರೈತ-ಕಾರ್ಮಿಕರು ಮೆರವಣಿಗೆಯಲ್ಲಿ ಬಂದಿದ್ದರು. ಜನತೆಯ ನಡುವೆ ಕಮ್ಯೂನಿಸ್ಟ್ ಪಾರ್ಟಿಗಿರುವ ಬೆಂಬಲವನ್ನು ಇದು ಪ್ರದರ್ಶಿಸುತ್ತಿತ್ತು. ಅಂದ ಮತ್ತು ಆಕರ್ಷಕವಾಗಿ ಅಲಂಕರಿಸಲ್ಪಟ್ಟ ಸಭಾಸ್ಥಳಕ್ಕೆ ಈ ಪ್ರಚಂಡ ಮೆರವಣಿಗೆ ಬಂದು ತಲುಪಿತು. ಸುಮಾರು 20 ಸಾವಿರ ಜನ ಸಭೆಯಲ್ಲಿದ್ದರು.

ಪ್ರಾರಂಭದಲ್ಲಿ ಕಹಳೆಯನ್ನೂದಲಾಯಿತು. ಶ್ರೀ ಆನಂದರವರು ಕ್ರಾಂತಿಗೀತೆಯನ್ನು ಹಾಡಿದ ನಂತರ ಶ್ರೀ ಎ. ಶಾಂತಾರಾಂ ಪೈಯವರು ಸ್ವಾಗತ ಭಾಷಣ ಮಾಡಿ ಶ್ರೀ ನರಸಿಂಹನ್‌ರವರನ್ನು ಅಧ್ಯಕ್ಷಸ್ಥಾನ ವಹಿಸಬೇಕೆಂದು ಕೇಳಿಕೊಂಡರು.

ಶ್ರೀ ಪಿ. ರಾಮಮೂರ್ತಿಯವರು ನಂತರ ಮಾತನಾಡಿ ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ದೀರ್ಘ ಭಾಷಣ ಮಾಡಿದರು. ಅವರು ಭಾಷಣವನ್ನು ಕಕ್ಕಿಲಾಯರವರು ಭಾಷಾಂತರಿಸಿದರು.

ನಂತರ ಶ್ರೀ ಎನ್. ಎಲ್. ಉಪಾಧ್ಯಾಯರು ಸಮ್ಮೇಳನದಲ್ಲಾದ ನಿರ್ಣಯಗಳನ್ನು ವಿವರಿಸುತ್ತಾ ಸರಕಾರದ ಜನ ವಿರೋಧಿ ಧೋರಣೆಗಳನ್ನು ಖಂಡಿಸಿ ಕಮ್ಯೂನಿಸ್ಟ್ ಪಾರ್ಟಿಗೆ ಬೆಂಬಲ ಕೋರಿದರು. ಶ್ರೀ ಕಕ್ಕಿಲ್ಲಾಯರು ಧನ್ಯವಾದವನ್ನು ಅರ್ಪಿಸಿದ ನಂತರ ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಮೇಳದವರಿಂದ ಕರ್ಣಪರ್ವ, ಶಲ್ಯಪರ್ವ ಮತ್ತು ಗದಾಪರ್ವವೆಂಬ ಬಯಲಾಟ ಅತ್ಯಂತ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಸರಕಾರದ ಪ್ರತಿಗಾಮಿ ಮತ್ತು ಜನವಿರೋಧಿ ಧೋರಣೆಗಳನ್ನು ತಡೆಯುವುದಕ್ಕೂ, ಜನತೆಯ ಹಿತಗಳನ್ನು ರಕ್ಷಿಸುವುದಕ್ಕೂ ಕಮ್ಯೂನಿಸ್ಟ್ ಪಾರ್ಟಿಯು ದುಡಿಯಬೇಕೆಂದು ಸಮ್ಮೇಳನವು ಕರೆ ಕೊಟ್ಟಿರುತ್ತದೆ. ಅದರೊಂದಿಗೆ ಇದನ್ನು ಯಶಸ್ವಿಗೊಳಿಸಲು ಪ್ರಬಲ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಿ ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಹೋರಾಡಲು ಸಮ್ಮೇಳನ ಸಂದೇಶ ನೀಡಿದೆ. ಈ ಸಮ್ಮೇಳನವು, ಬಹಿರಂಗ ಅಧಿವೇಶನ ಪ್ರತಿನಿಧಿಗಳಲ್ಲಿ ಹೊಸ ಸ್ಫೂರ್ತಿಯನ್ನು ಹುಟ್ಟಿಸಿದ್ದಲ್ಲದೆ, ಹೊಸ ಮಾರ್ಗದರ್ಶನವನ್ನು ನೀಡಿದೆ. ಈ ಸಮ್ಮೇಳನವು ಕರ್ನಾಟಕದ ಪಾರ್ಟಿಯ ಪ್ರಗತಿಯಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಸಮ್ಮೇಳನವನ್ನು ಯಶಸ್ವಿಗೊಳಿಸಲು ಅತ್ಯಂತ ಶ್ರಮವಹಿಸಿ ದುಡಿದ ದ. ಕ. ಜಿಲ್ಲಾ ಕಮ್ಯೂನಿಸ್ಟ್‌ಪಾರ್ಟಿಯನ್ನು ಪ್ರಾಂತ ಸಮಿತಿಯು ಅಭಿನಂದಿಸುತ್ತದೆ. ಮತ್ತು ಅದಕ್ಕೆ ಸಹಾಯ ನೀಡಿದ ಮಹನೀಯರಿಗೂ, ದುಡಿದ ಸ್ವಯಂಸೇವಕರಿಗೂ, ಚರಿತ್ರಾರ್ಹವಾದ ಮೆರವಣಿಗೆಯಲ್ಲಿ ಭಾಗವಹಿಸಿದ ಶ್ರೀ ಪುರುಷರೆಲ್ಲರಿಗೂ ಪ್ರಾಂತ ಸಮಿತಿಯು ವಂದನೆಯನ್ನರ್ಪಿಸುತ್ತದೆ.

—✥—

ಪ್ರಾಂತ ಸಮ್ಮೇಳನದ ನಿರ್ಣಯಗಳು

(೯ನೇ ಪುಟದಿಂದ)

ಲಾದರೂ ಒಕ್ಕಲು ತಪ್ಪಿಸುವುದನ್ನು ಎರಡು ವರ್ಷಗಳ ತನಕ ಸಂಪೂರ್ಣವಾಗಿ ನಿಷೇಧಿಸಬೇಕು. (2) ಕರ್ನಾಟಕ ಪ್ರಾಂತ ರೈತಸಂಘವು ಭೂಸಂಬಂಧ ಶಾಸನದ ಬಗ್ಗೆ ಅಂಗೀಕರಿಸಿರುವ ನಿರ್ಣಯದಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಒಳಗೊಂಡ ಕಾನೂನು ಈ ವರ್ಷದ ಬಜೆಟ್ ಅಧಿವೇಶನದಲ್ಲಿ ಮಂಜೂರಾಗಬೇಕು (3) ಜೋಡಿ-ಇನಾಂ ರದ್ದಿಯಾತಿಕಾನೂನಿನಂತೆ ಎಲ್ಲ ಜೋಡಿ ಗ್ರಾಮಗಳನ್ನೂ ಕೂಡಲೆ ಸರಕಾರ ತೆಗೆದುಕೊಂಡು ರೈತರಿಗೆ ಜಮಾನಿನ ಮಾಲಿಕತನ ಕೊಡುವ ಕೆಲಸವನ್ನು ಬೇಗನೆ ಪೂರ್ತಿಗೊಳಿಸಬೇಕು. ಎಂದು ಈ ಸಮ್ಮೇಳನವು ಸರಕಾರವನ್ನು ಆಗ್ರಹಪೂರ್ವಕ ಒತ್ತಾಯಿಸುತ್ತದೆ.

ಪ್ರಾಂತ ಆದ್ಯಂತವಾಗಿ ಈ ಬಗ್ಗೆ ಏಕೀಕೃತವಾದ ಚಳವಳಿಯನ್ನು ನಡೆಸಬೇಕೆಂದು ಎಲ್ಲ ಪಾರ್ಟಿ ಘಟಕಗಳಿಗೂ ಈ ಸಮ್ಮೇಳನ ಕರೆ ಕೊಡುತ್ತದೆ

ಶರಾವತಿ ಯೋಜನೆಯ ಉದ್ಘಾಟನೆ

ಇದೇ ಫೆಬ್ರವರಿ ಏದರಂದು ಶರಾವತಿ ಯೋಜನೆಯ ಉದ್ಘಾಟನೆ ನಡೆಯಿತು. ಕೇಂದ್ರದ ನೀರಾವರಿ ಸಚಿವ ಶ್ರೀ. ಎಸ್. ಕೆ. ಪಾಟೀಲರಿಂದ ಇದರ ಉದ್ಘಾಟನೆಯಾಯಿತು.

ಈ ಯೋಜನೆಯು ಭಾರತದ 3 ಹಿರಿಯ ಯೋಜನೆಗಳಲ್ಲೊಂದು. ಇದರಿಂದ ಕರ್ನಾಟಕಕ್ಕೆ ಮಾತ್ರವಲ್ಲ, ನೆರೆಯ ಆಂಧ್ರ, ಮದರಾಸು, ಮುಂಬಯಿ ಹಾಗೂ ಕೇರಳಗಳಿಗೂ ವಿದ್ಯುತ್ ಪೂರೈಕೆ ನೀಡಲಾಗುದೆಂಬ ಹಾರೈಕೆ ಇದೆ.

ಕಾಸಿಗೊಂಡು ಯೂನಿಟ್

ಈ ಯೋಜನೆಯು ಸಂಪೂರ್ಣಗೊಂಡ ನಂತರ ನಮಗೆ ಕಾಸಿಗೊಂಡು ಯೂನಿಟ್ ಸಿಗಬಹುದೆಂದು ನಂಬಲಾಗಿದೆ; ಈ ಯೋಜನೆಯಿಂದಾಗಿ ಒಟ್ಟು 4500 ಮಿಲಿಯ ಯೂನಿಟ್ ವಿದ್ಯುತ್ ಉತ್ಪಾದನೆಯಾಗುವುದು.

—ಕಟಕ

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2
phone: 3810